ಶ್ರೀ ಜಗದೀಶ್ ಶೆಟ್ಟರ್: ಆಮೇಲೆ ಬೇಕಾದರೆ ಅವರು ವಿಶ್ವಾಸ ಮತ್ತು ಅವಿಶ್ವಾಸ ಎಂದು ಅವರು ನಂತರ ಪ್ರಸ್ತಾಪ ಮಾಡಲಿ. ನಾವು ಎಲ್ಲವನ್ನು ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು: ತಾವು ಎತ್ತಿರುವ ಕ್ರಿಯಾಲೋಪ ಇದಕ್ಕೆ ಬರುವುದಿಲ್ಲ. ನೀವು ಬೇಕಾದರೆ ಬೇರೆ ರೂಪದಲ್ಲಿ ತನ್ನಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀ ಕೆ.ಎಸ್.ಈಶ್ವರಪ್ಪ ಶ್ರೀ ಆರ್.ಅಶೋಕ, ಸಚಿವರುಗಳಾದಂತಹ ಶ್ರೀ ಗೋವಿಂದ ಕಾರಜೋಳ, ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, ಶ್ರೀ ಉಮೇಶ್ ಕತ್ತಿ, ಶ್ರೀ ಬಸವರಾಜ ಬೊಮ್ಮಾಯಿ, ಕು.ಶೋಭಾ ಕರಂದ್ಲಾಜೆ, ಶ್ರೀ ಸಿ.ಪಿ.ಯೋಗೀಶ್ವರ್, ಶ್ರೀ ರೇವುನಾಯಕ್ ಬೆಳಮಗಿ, ಶ್ರೀ ರಾಜುಗೌಡ, ಶ್ರೀ ಅರವಿಂದ ಲಿಂಬಾವಳಿ, ಶ್ರೀ ಕಳಸಪ್ಪ ಬಂಡಿ, ಶ್ರೀ ಕೋಟಾ ಶ್ರೀನಿವಾಸ್ ಪೂಜಾರಿ, ಶ್ರೀ ಅಪ್ಪಚ್ಚು ರಂಜನ್‌ರವರು. ಇನ್ನುಳಿದ ಕೆಲವು ಸಚಿವರು ವಿಧಾನ ಪರಿಷತ್ತಿನಲ್ಲಿರುತ್ತಾರೆ.

ಅಧ್ಯಕ್ಷರು: ಆಯಿತು. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿ.

4. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ:– ರಾಜ್ಯದಲ್ಲಿ ಬರ ಪರಿಸ್ಥಿತಿ ಬಗ್ಗೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ನಿಯಮ 60ರ ಅಡಿಯಲ್ಲಿ ಒಂದು ಸೂಚನೆಯನ್ನು ಕೊಟ್ಟಿದ್ದೇನೆ. ಅದು ಬಹಳ ಪ್ರಾಮುಖ್ಯವಾದಂಥ ಮತ್ತು ತುರ್ತಾಗಿ ಚರ್ಚೆ ಮಾಡಬೇಕಾದಂಥ ವಿಷಯಕ್ಕೆ ಸಂಬಂಧಪಟ್ಟದ್ದಾಗಿದೆ. ಕಳೆದ ವರ್ಷ 2011 ರಲ್ಲಿ ಮಳೆಯಾಗಲಿಲ್ಲ. ನಮಗೆ ಮುಂಗಾರು ಮತ್ತು ಹಿಂಗಾರು ಎರಡು ಕೂಡ ಮಳೆ ವಿಫಲವಾಯಿತು. ಈ ರಾಜ್ಯದ ರೈತರು ಮತ್ತು ಕೂಲಿಕಾರ್ಮಿಕರು ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಂಡಿರುತ್ತಾರೆ. ಮತ್ತೆ ಈ ಬಾರಿ ಮುಂಗಾರು ಕೂಡ ಇಲ್ಲಿಯವರೆಗೆ ಮಳೆ ಬಿದ್ದಿಲ್ಲ. ಕೆಲವು ಕಡೆ ಅಲ್ಲಿ ಇಲ್ಲಿ scattering ರೀತಿ ಮಳೆ ಆಗಿದೆ. As a matter of fact, ಮಲೆನಾಡಿನಲ್ಲಿಯೂ ಕೂಡ ವಾಡಿಕೆಯಷ್ಟು ಮಳೆ ಆಗಿಲ್ಲ. Coastal area ದಲ್ಲಿಯೂ ಕೂಡ ವಾಡಿಕೆಯಷ್ಟು ಮಳೆ ಬಿದ್ದಿಲ್ಲ. 50% ಮಳೆ ಆಗಿದೆ. ದಕ್ಷಿಣ ಒಳನಾಡು ಮತ್ತು ಉತ್ತರ ಒಳನಾಡಿನಲ್ಲಿಯೂ ಕೂಡ ಮಳೆ ಬಿದ್ದಿಲ್ಲ. ಏಪ್ರಿಲ್‌ನಲ್ಲಿ ಸ್ವಲ್ಪ pre-monsoon ಮಳೆ ಬಿಟ್ಟರೆ ಈ ಕಡೆ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ತುಮಕೂರು, ಚಿತ್ರದುರ್ಗ ಕೆಲವು ಕಡೆ

ಏಪ್ರಿಲ್‌ನಲ್ಲಿ ಸ್ವಲ್ಪ ಮಳೆ ಆಯಿತು, ಬಿತ್ತನೆ ಮಾಡಿದರು, ಆದರೆ ಬೆಳೆ ಎಲ್ಲಾ ಹೊಯಿತು. ಮೇ ತಿಂಗಳಲ್ಲಿ ಮಳೆ ಆಗಲಿಲ್ಲ, ಜೂನ್ ತಿಂಗಳಿನಲ್ಲಿ ಕೂಡ ಮಳೆ ಆಗಿಲ್ಲ. ಇವತ್ತಿನವರೆಗೂ 16, 17 ನೇ ತಾರೀಖಿನವರೆಗೂ ಕೂಡ ಮಳೆ ಆಗಿಲ್ಲ. ಬಿತ್ತನೆಯಾಗಿರತಕ್ಕಂಥದ್ದು ಬಹಳ ಕಡಿಮೆ, ಕರ್ನಾಟಕದಲ್ಲಿ ಸುಮಾರು 74.70 ಲಕ್ಷ ಹೆಕ್ಟೇರ್ ಪ್ರದೇಶ ಮುಂಗಾರು ಬಿತ್ತನೆ ಆಗಬೇಕು.

ಆದರೆ ಇಲ್ಲಿಯವರೆಗೂ ಬಿತ್ತನೆ ಆದದ್ದು ಕೇವಲ 20 ಲಕ್ಷ ಹೆಕ್ಟೇರ್ ಮಾತ್ರ. Pre-monsoon ನಲ್ಲಿ ಸ್ವಲ್ಪ ಆಗಿತ್ತು. ರೈತರು ಸಾಲ ಮಾಡಿ ದುಡ್ಡು ಕೊಟ್ಟು ಗೊಬ್ಬರ, ಬೀಜ ಹಾಕಿದ್ದರು. ಅದೂ ಕೂಡ ಪೈರು ಬಂದು ಒಣಗಿ ಹೊಗಿದೆ. ಮೈಸೂರಿನಲ್ಲಿ ಜೋಳ, ಕಡಲೆ, ಹತ್ತಿ, ಹೊಗೆಸೊಪ್ಪು, ಎಲ್ಲಾ ರೀತಿಯ ದ್ವಿದಳ ಧಾನ್ಯಗಳು, ಹೆಸರು, ಉದ್ದು, ಮೆಕ್ಕೆಜೊಳ, ಈ ರೀತಿ ಎಲ್ಲವೂ ಒಣಗಿ ಹೋಗಿವೆ. ರೈತರು ಇವತ್ತು ಬಹುಶಃ ಯಾವ ಕಾಲದಲ್ಲಿಯೂ ಕೂಡ ಇಷ್ಟೊಂದು ಕಷ್ಟಕ್ಕೆ ಒಳಗಾಗಿರಲಿಲ್ಲ. ಕಳೆದ ವರ್ಷದ ಬರದಿಂದ ರೈತರು ಇನ್ನೂ ಹೊರಗೆ ಬರಲು ಆಗಿಲ್ಲ. ಮತ್ತೆ ಅದರ ಮೇಲೆ ಇನ್ನೊಂದು ಬರೆ. ಏಕೆಂದರೆ, ಇಡೀ ದೇಶದಲ್ಲಿ ರಾಜಸ್ಥಾನ ಬಿಟ್ಟರೆ ಕರ್ನಾಟಕದಲ್ಲಿ ಹೆಚ್ಚು ಮಳೆ ಆಶ್ರಯ ಪ್ರದೇಶಗಳಿವೆ. ಸುಮಾರು 80% ಜನ ಸಣ್ಣ ರೈತರು , ಅತಿ ಸಣ್ಣ ರೈತರು ಮಳೆ ಆಶ್ರಯದಲ್ಲಿ, ಐದು ಎಕರೆ ಜಮೀನು ಒಳಗೆ ಇರುವರ ಕಷ್ಟವಂತೂ ಹೇಳುವುದಕ್ಕೆ ಆಗುವುದಿಲ್ಲ. ಇಂತಹ ಕೆಟ್ಟ ಪರಿಸ್ಥಿತಿ ಕರ್ನಾಟಕದಲ್ಲಿ ಯಾವತ್ತೂ ಕೂಡ ಬಂದಿರಲಿಲ್ಲ. ಭೀಕರವಾದಮತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಒಂದು ವೇಳೆ ಏನಾದರೂ ಈ ತಿಂಗಳ ಕೊನೆಯವರೆಗೂ ಮಳೆ ಬರದೇ ಹೋದರೆ, ಆ ರೀತಿ ಆಗಬಾರದೆಂದು ಈ ವರ್ಷ ಮಳೆ ಬರಲಿ ಎಂದು ನಾವೆಲ್ಲಾ Rain God ಗೆ ಪ್ರಾರ್ಥನೆ ಮಾಡೋಣ. ಒಂದು ವೇಳೆ ಮಳೆ ಬರದೇ ಹೋದರೆ, assuming for argument sake, ಬಹುಶಃ ಕರ್ನಾಟಕದಲ್ಲಿ ಹಳ್ಳಿಗಾಡಿನ ರೈತರ ಕಷ್ಟ ಊಹಿಸಿಕೊಳ್ಳುವುದಕ್ಕೂ ಆಗುವುದಿಲ್ಲ. ಕೆರೆ–ಕುಂಟೆಗಳಲ್ಲಿ ನೀರಿಲ್ಲ. ಜಲಾಶಯ–ಗಳೆಲ್ಲವೂ ಬತ್ತಿ ಹೋಗಿದೆ. For the first time, ಕಳೆದ 15 ವರ್ಷಗಳಲ್ಲಿ ಜಲಾಶಯಗಳ ನೀರಿನ ಮಟ್ಟ ಈ ಮಟ್ಟಕ್ಕೆ ಇಳಿದಿರಲಿಲ್ಲ. ಬಹಳ ಕೆಳ ಮಟ್ಟಕ್ಕೆ ಹೋಗಿದೆ. ಜೂನ್, ಜುಲೈ ತಿಂಗಳಿನಲ್ಲಿ ಮಳೆ ಆಗುತ್ತಿತ್ತು. ಸ್ವಲ್ಪ ನೀರು ಬರುತ್ತಿತ್ತು. 50% capacity ಗೆ ನೀರು ತುಂಬಿಕೊಳ್ಳುತ್ತಿತ್ತು. ಈ ಬಾರಿ ನೀರಿಲ್ಲ. ಉದಾಹರಣೆಗೆ ಕೆ.ಆರ್.ಎಸ್.ಹಾಗೂ ಕಬಿನಿಯಲ್ಲಿ ಈ ಕಾಲದಲ್ಲಿ 50% ನೀರು ಇರಬೇಕಾಗಿತ್ತು. ಈಗ 75 ಅಡಿಗೆ ನೀರು ಬಂದಿದೆ. Maximum 124 ಅಡಿ ನೀರು ಇರಬೇಕು. ಗರಿಷ್ಠ ಇಷ್ಟೊತ್ತಿಗೆ 100 ಅಡಿ ಮೇಲೆ ನೀರು

ಇರಬೇಕಾಗಿತ್ತು. ಈಗ 76 ಅಡಿಗೆ ಬಂದಿದೆ. ಮಾನ್ಯ ಅಶೋಕ್‌ರವರೆ ತಾವು in charge ಇದ್ದೀರಿ. for the first time, ನಾನು ನಿನ್ನೆ ಬರುವಾಗ ಮದ್ದೂರಿನಲ್ಲೆಲ್ಲಾ ನೊಡಿಕೊಂಡು ಬಂದೆ. ಕಬ್ಬು ಎಲ್ಲಾ ಒಣಗಿ ಹೋಗಿದೆ. ಈಗ ತಾನೇ ಮೊನ್ನೆ ಜಮಖಂಡಿಯಲ್ಲಿ ಚಳುವಳಿ ಮಾಡಿದರು. ಅಲ್ಲಿ 45 ಸಾವಿರ ಎಕರೆಯಲ್ಲಿ ಕಬ್ಬು ಒಣಗಿ ಹೋಗಿದೆ ಅಲ್ಲವೆ ಮಾನ್ಯ ನಿರಾಣಿಯವರೆ? ಅಷ್ಟಾದರೂ ನೀವು ಜಗಳ ಆಡುತ್ತಾ ಕುಳಿತಿದ್ದೀರಲ್ಲಾ ಹೇಗೆ? ಕುರ್ಚಿಗೋಸ್ಕರ ಜಗಳವಾಡುತ್ತಾ ಕುಳಿತಿದ್ದೀರಿ. ಈ ರೀತಿ ನಾನು ಯಾವ ಕಾಲದಲ್ಲಿಯೂ ನೋಡಿಲ್ಲ. ಬರಗಾಲ ಇದೆ. ಕಳೆದ ಮೂರು ತಿಂಗಳಿನಿಂದ ಜಗಳ. ಬರಗಾಲ ಮರತೇ ಬಿಟ್ಟಿದ್ದಾರೆ. ಇಂತಹ ಬೇಜವಾಬ್ದಾರಿ ಸರ್ಕಾರ ಇದೆ. ಆದ್ದರಿಂದ ಮಾನ್ಯ ಅಧ್ಯಕ್ಷರೆ ಇದು Preliminary Submission ಆಗಿರುವುದರಿಂದ ಅವೆಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಸದನದ ಅಜೆಂಡಾದಲ್ಲಿರುವ ಬೇರೆ ವಿಷಯಗಳನ್ನೆಲ್ಲಾ ಬದಿಗೊತ್ತಿ ಇದನ್ನು ನಿಯಮ 60 ರ ಅಡಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಏಕೆಂದರೆ seriousness ಬರಬೇಕು. It is a very very serious matter. 2/3rd of the population are depending upon Agriculture. ಅವರ ಬದುಕಿನ ಬಗ್ಗೆ ಚೆಲ್ಲಾಟವಾಡಬಾರದು. ಅದಕ್ಕೋಸ್ಕರ ಇದರ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು. ನಿಯಮ 60 ರ ಅಡಿಯಲ್ಲಿಯೇ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಬೇರೆ ವಿಷಯಗಳನ್ನೆಲ್ಲಾ ಮುಂದಕ್ಕೆ ಹಾಕಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ನನ್ನ preliminary submission. ನಾನು ಧೀರ್ಘವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ತಾವು ಚರ್ಚೆಗೆ ಅವಕಾಶ ಮಾಡಿಕೊಡುತ್ತೀರೆಂಬ ವಿಶ್ವಾಸದಿಂದ ನಾನು ಕಡಿಮೆ ಹೇಳಿದ್ದೇನೆ. ಇಲ್ಲವೆಂದರೆ ಜಾಸ್ತಿ ಹೇಳುತ್ತಿದ್ದೆ. ಆದ್ದರಿಂದ ದಯಮಾಡಿ ಅವಕಾಶ ಮಾಡಿಕೊಡಬೇಕು.

ಶ್ರೀ ಹೆಚ್. ಡಿ. ರೇವಣ್ಣ (ಹೊಳೆ ನರಸೀಪುರ): ಮಾನ್ಯ ಅಧ್ಯಕ್ಷರೆ...

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ನಿಮ್ಮ ನಿಲುವಳಿ ಸೂಚನೆ ತಿರಸ್ಕಾರವಾಗಿದೆ. ನಿಯಮಾನುಸಾರ ಒಂದೇ ಒಂದು ನಿಲುವಳಿ ಸೂಚನೆಗೆ ಅವಕಾಶವಿದೆ.

ಶ್ರೀ ಹೆಚ್. ಡಿ. ರೇವಣ್ಣ: ನಾನೂ ಬೆಳಿಗ್ಗೆನೇ ನೋಟೀಸ್ ಕೊಟ್ಟಿದ್ದೇನೆ. ನಮಗೂ ಅವಕಾಶ ಕೊಡಿ.

ಅಧ್ಯಕ್ಷರು: ನಿಯಮಾನುಸಾರ ಒಂದೇ ಒಂದು ನಿಲುವಳಿ ಸೂಚನೆಗೆ ಅವಕಾಶವಿದೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಇದು ಬರಗಾಲ. ರಾಜ್ಯದಲ್ಲಿ ಬರಗಾಲ ಕೇವಲ 123 ತಾಲ್ಲೂಕುಗಳಲ್ಲಿ ಮಾತ್ರ ಇಲ್ಲ. 224 ವಿಧಾನಸಭಾ ಕ್ಷೇತ್ರದ ನಗರ ಪ್ರದೇಶಗಳಲ್ಲಿಯೂ ಇವತ್ತು ಬರಗಾಲವಿದೆ. ಆದ್ದರಿಂದ ನಿಯಮ 60ರ ಅಡಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕೆಂದು ಇವತ್ತು ಬೆಳಗ್ಗೆನೇ ತಮ್ಮ ಗಮನಕ್ಕೆ ತಂದಿದ್ದೇನೆ. ಆದ್ದರಿಂದ ದಯಮಾಡಿ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು: ಒಂದು ದಿನದಲ್ಲಿ ಒಂದು ನಿಲುವಳಿ ಸೂಚನೆಗೆ ಅವಕಾಶವಿದೆ. ಚರ್ಚೆಗೆ ಅವಕಾಶ ಮಾಡಿ ಕೊಡೋಣ. ಎರಡು ಹೇಗೆ ಬರುತ್ತದೆ?

ಶ್ರೀ ಹೆಚ್. ಡಿ. ರೇವಣ್ಣ: ಎರಡನ್ನೂ ಒಟ್ಟಿಗೆ ಅದರಲ್ಲಿ ಸೇರಿಸಿ.

ಅಧ್ಯಕ್ಷರು: ಸೇರಿಸಿ ಕೊಡುವುದು that is different. ಈಗ ನೀವು submission ಮಾಡುವುದಕ್ಕೆ ಹೇಗೆ ಬರುತ್ತದೆ? submission ಬೇಡ.

ಶ್ರೀ ಹೆಚ್. ಡಿ. ರೇವಣ್ಣ: ನಿಯಮ 60 ರ ಅಡಿಯಲ್ಲಿ ಮಾನ್ಯ ಸಿದ್ದರಾಮಯ್ಯನವರೂ ಕೊಟ್ಟಿದ್ದಾರೆ. ನಾನೂ ಕೊಟ್ಟಿದ್ದೇನೆ. ಬೇಕಾದರೆ ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಿ, ಮಾಡಬಾರದು ಎಂದು ಏನೂ ಇಲ್ಲ. ದಯಮಾಡಿ ಇದಕ್ಕೆ ಅವಕಾಶ ಕೊಡಿ. ಏಕೆಂದರೆ. ರಾಜ್ಯದಲ್ಲಿ ಇವತ್ತು ಕಳೆದ 6 ತಿಂಗಳಿನಿಂದಲೂ ಬರಗಾಲವಿದ್ದರೂ ಬರಗಾಲ ನಿರ್ವಹಣೆ ಮಾಡುವುದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. 123 ತಾಲ್ಲೂಕು ಬರಗಾಲಪೀಡಿತ ಪ್ರದೇಶಗಳು ಎಂದು ಘೋಷಣೆಯಾಗಿತ್ತು. 123 ತಾಲ್ಲೂಕು ಅಲ್ಲ, ಕೇಂದ್ರದ ಮಂತ್ರಿಗಳೇ 148 ತಾಲ್ಲೂಕು ಬರಗಾಲಪೀಡಿತ ಪ್ರದೇಶಗಳು ಎಂದು ಹೇಳುವ ಪರಿಸ್ಥಿತಿಗೆ ಬಂದಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ ಎನ್ನುವ ಭಾವನೆಯನ್ನು ಕೇಂದ್ರ ಸರ್ಕಾರದ ಕೃಷಿ ಮಂತ್ರಿಗಳು ಹೇಳಿ, ಕುಡಿಯುವ ನೀರಿಗೆ ಸುಮಾರು 100 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಹೇಳಿ, ಕಳೆದ 6 ತಿಂಗಳಿನಲ್ಲಿ 10 ರೂಪಾಯಿಯೂ ಬಿಡುಗಡೆಯಾಗಿಲ್ಲ.

ಅಧ್ಯಕ್ಷರು: ಚರ್ಚೆ ಮಾಡುವಾಗ ಹೇಳಿ.

ಶ್ರೀ ಹೆಚ್. ಡಿ. ರೇವಣ್ಣ: ಕೇಂದ್ರದ ಕೃಷಿ ಮಂತ್ರಿಗಳು ಹೇಳುವ ಪರಿಸ್ಥಿತಿ ಆದರೆ ತಾವು ಲೆಕ್ಕ ಹಾಕಿಕೊಳ್ಳಿ. ಏಕೆಂದರೆ, ರಾಜ್ಯದಲ್ಲಿ 123 ತಾಲ್ಲೂಕು ಅಲ್ಲ, 148 ತಾಲ್ಲೂಕುಗಳಲ್ಲಿ ಬರಗಾಲವಿದೆ ಎಂದು ಕೇಂದ್ರ ಕೃಷಿ ಸಚಿವರೇ ಹೇಳುತ್ತಿದ್ದಾರೆ. ಮತ್ತೆ ಅದರ ಜೊತೆಗೆ ಕೇಂದ್ರದಿಂದ ಹಣ..

(ಗೊಂದಲ)

ಶ್ರೀ ಎಂ. ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮೊದಲು ಬರದ ವಿಷಯ ಮಾತನಾಡಿದ ನಂತರ ಬೇರೆ ವಿಷಯ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ: ನಾನು ಬರದ ವಿಷಯವನ್ನೇ ಮಾತನಾಡು-ತ್ತಿದ್ದೇನೆ. ಬೇರೆ ವಿಷಯ ಮಾತನಾಡುತ್ತಿಲ್ಲ.

(ಗೊಂದಲ)

ಶ್ರೀ ಕೆ. ಎಂ. ಶಿವಲಿಂಗೇಗೌಡ: ಇದು ಬಹಳ ಗಂಭೀರವಾದಂತಹ ವಿಚಾರ.

(ಗೊಂದಲ)

ಅಧ್ಯಕ್ಷರು: ಗಂಭೀರವಾದ ವಿಷಯವಾದ್ದರಿಂದ ನಾನೂ ಅವಕಾಶ ಕೊಟ್ಟಿದ್ದೇನೆ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಶಾಸಕರು ಏನಾದರೂ ಅವರ ಕ್ಷೇತ್ರದಲ್ಲಿ ಮರ್ಯಾದೆಯಿಂದ ಇರಬೇಕೆಂದರೆ ಈ ಸದನದಲ್ಲಿ ತೀರ್ಮಾನ ಮಾಡಿ. ಸದನದಲ್ಲಿ ತೀರ್ಮಾನವಾಗಬೇಕು. ದನಕರುಗಳಿಗೆ ಮೇವಿಲ್ಲ. ಅಧಿಕಾರಿಗಳು ಕೊಟ್ಟಿರುವ ಮಾಹಿತಿಯನ್ನು ತಂದಿದ್ದೇವೆ. ದಯವಿಟ್ಟು ಚರ್ಚೆಗೆ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಒಂದೇ ಒಂದು ನಿಲುವಳಿ ಸೂಚನೆಗೆ ಅವಕಾಶವಿದೆ. ಚರ್ಚೆಗೆ ಎಲ್ಲರಿಗೂ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಕೆ. ಎಂ. ಶಿವಲಿಂಗೇಗೌಡ: ಇದರಲ್ಲಿ ನಮ್ಮ ವಿರೋಧಪಕ್ಷದ ನಾಯಕರು ತರುತ್ತಾರೆ, ನಾವು ತಂದಿಲ್ಲ ಎನ್ನುವುದಲ್ಲ. ಎಲ್ಲರಿಗೂ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು: ಎಲ್ಲರಿಗೂ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ: ಮೊದಲು ಮಾತನಾಡಲು ಅವಕಾಶ ಮಾಡಿಕೊಡಿ. ಆನಂತರ ತೀರ್ಮಾನ ಮಾಡಿ.

(ಗೊಂದಲ)

ಶ್ರೀ ಕೆ. ಎಂ. ಶಿವಲಿಂಗೇಗೌಡ: constituency ಯಲ್ಲಿ ಮಾನ ಮರ್ಯಾದೆ ಇಟ್ಟುಕೊಂಡು ಇರಲು ಆಗುತ್ತಿಲ್ಲ. ಕುಡಿಯುವುದಕ್ಕೆ ನೀರಿಲ್ಲ, ದನಕರುಗಳಿಗೆ ಮೇವಿಲ್ಲ. ನಾವು ಅಲ್ಲಿ ಏನು ಮಾಡಬೇಕು?

(ಗೊಂದಲ)

ಶ್ರೀ ಹೆಚ್. ಸಿ. ಬಾಲಕೃಷ್ಣ: ಮೊದಲು ಅವರು ಮಾತನಾಡಲಿ. ನಂತರ ತೀರ್ಮಾನ ಮಾಡಿ.

(ಗೊಂದಲ)

ಅಧ್ಯಕ್ಷರು: ಒಂದೇ ಒಂದು ನಿಲುವಳಿ ಸೂಚನೆಗೆ ಅವಕಾಶವಿದೆ. ಎಲ್ಲಿ ಮಾತನಾಡಲು ಆಗುತ್ತದೆ?

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಇದು ಬಹಳ ಗಂಭಿರವಾದ ವಿಚಾರ. ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಕೆ. ಎಂ. ಶಿವಲಿಂಗೇಗೌಡ: ಅವರು ತಂದಿದ್ದಾರೆ, ಇವರಿಗೆ ಕೊಡುವುದಿಲ್ಲ, ಅವರಿಗೆ ಕೊಡುವುದಿಲ್ಲ ಎಂದು ನಿಯಮಗಳು ಬೇಡ. ಅವಕಾಶ ಕೊಡಿ. ಮಾನ ಮಾರ್ಯಾದೆ ಇಟ್ಟುಕೊಂಡು ನಮ್ಮ ಕ್ಷೇತ್ರಕ್ಕೆ ಹೋಗುವುದಕ್ಕೆ ಆಗುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ಹೀಗೆ ಮಾತನಾಡಿದರೆ ಹೇಗೆ? ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, preliminary submission ಗೆ ಅವಕಾಶ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ: ನಾವು ಬರಗಾಲದ ಬಗ್ಗೆಯೇ ಕೇಳುತ್ತಿದ್ದೇವೆ.

(ಗೊಂದಲ)

ಶ್ರೀ ಕೆ. ಎಂ. ಶಿವಲಿಂಗೇಗೌಡ: ಈಗ ಪರಿಸ್ಥಿತಿ ಬಹಳ ಕೆಟ್ಟು ಹೋಗಿದೆ. ಬಹಳ ಗಂಭೀರವಾದ ವಿಷಯವಾಗಿದೆ.

(ಗೊಂದಲ)

ಅಧ್ಯಕ್ಷರು: ಈಗ submit ಮಾಡಿದ್ದೀರಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ನಮ್ಮ ನಾಯಕರಿಗೆ ಮಾತನಾಡಲು ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು: ಆಯಿತು.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ: ನಿಯಮ 60 ರ ಅಡಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ನಾನು ಮಂಡನೆ ಮಾಡುತ್ತೇನೆ. ಆನಂತರ ತಾವು ಏನಾದರೂ ನಿರ್ಣಯ ಮಾಡಿ.

(ಗೊಂದಲ)

ಶ್ರೀ ಎಂ. ಬಿ. ಪಾಟೀಲ್: ಮಾನ್ಯ ಅಧ್ಯಕ್ಷರೆ, ಬರಗಾಲದ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ನಿಯಮ 60 ರ ಅಡಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಲು ತಾವು ಅವಕಾಶ 'ಮಾಡಿಕೊಡಬೇಕು. ಸತತವಾಗಿ ಎರಡು ವರ್ಷಗಳ ಕಾಲ, ಹೋದ ವರ್ಷವೂ ಆಯಿತು, ಈ ವರ್ಷವೂ ಕೂಡ ಇದೆ.

(ಗೊಂದಲ)

ಶ್ರೀ ಆರ್. ಅಶೋಕ್ (ಉಪಮುಖ್ಯಮಂತ್ರಿ): ಮಾನ್ಯ ಅಧ್ಯಕ್ಷರೆ, ತಾವು submission ಗೆ ಅವಕಾಶ ಕೊಟ್ಟಿದ್ದೀರಿ. ಚರ್ಚೆಗೆ ನಾವೇನೂ ಹಿಂದೇಟು ಹಾಕುವುದಿಲ್ಲ. ಚರ್ಚೆಗೆ ನಾವು ಸಿದ್ಧರಿದ್ದೇವೆ. ಸುಮಾರು 30–40 ವರ್ಷಗಳಾದ ಮೇಲೆ ಕರ್ನಾಟಕದಲ್ಲಿ ನಾವು ಈ ರೀತಿಯ ಬರಗಾಲವನ್ನು ನೋಡುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಾದ ಜಗದೀಶ್ ಶೆಟ್ಟರ್ ಮೊನ್ನೆಯೂ ಸಹಾ ಪ್ರತಿ ತಾಲ್ಲೂಕಿಗೆ ಒಂದು ಕೋಟಿ ರೂಪಾಯಿ ಹಣಬಿಡುಗಡೆ ಮಾಡಿ, ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಎಲ್ಲಿ ಬಿಡುಗಡೆ ಮಾಡಿದ್ದೀರಿ? ಯಾರಿಗೆ ಕೊಟ್ಟಿದ್ದೀರಿ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಕೇವಲ ಪೇಪರ್‌ನಲ್ಲಿ, ಟಿ.ವಿ.ಯಲ್ಲಿ advertisement ಕೊಡುತ್ತೀರಾ?

(ಗೊಂದಲ)

ಶ್ರೀ ಆರ್.ಅಶೋಕ್: ನಾವು ಚರ್ಚೆ ಮಾಡಲು ಹಿಂದೇಟು ಹಾಕುತ್ತಿಲ್ಲ. ದೀರ್ಘವಾಗಿ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪ ಮುಖ್ಯಮಂತ್ರಿಯವರೆ ತಾವು ಉತ್ತರ ಕೊಡುವಾಗ ಹೇಳಿ. ನಾವು ಮಾನ್ಯ ಅಧ್ಯಕ್ಷರಿಗೆ ನಿಯಮ 60 ರ ಅಡಿಯಲ್ಲಿ ತೆಗೆದುಕೊಳ್ಳಬೇಕೆಂದು convince ಮಾಡುತ್ತಿದ್ದೇವೆ.

(ಗೊಂದಲ)

ಶ್ರೀ ಆರ್. ಅಶೋಕ್: ನಿಯಮ 69 ರ ಅಡಿಯಲ್ಲಿ ಅದಕ್ಕೆ ಅವಕಾಶ ಕೊಡಿ ಎಂದು ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಇಲ್ಲ, ಆ ರೀತಿ ಆಗುವುದಿಲ್ಲ. why Rule 69? ಮಾನ್ಯ ಅಧ್ಯಕ್ಷರೆ, ನಿಯಮ 60 ರ ಅಡಿಯಲ್ಲಿಯೇ ಚರ್ಚೆಗೆ ತೆಗೆದುಕೊಳ್ಳಬೇಕು.

(ಗೊಂದಲ)

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಉತ್ತರ ಕರ್ನಾಟಕದಲ್ಲಿ..

(ಗೊಂದಲ)

ಶ್ರೀ ಬಂಡೆಪ್ಪ ಕಾಶೆಂಪೂರ್: ಮಾನ್ಯ ಅಧ್ಯಕ್ಷರೆ, ಎಲ್ಲಿಯೂ ಹಣ ಬಿಡುಗಡೆ ಆಗಿಲ್ಲ. ಈ ರೀತಿ ಸುಳ್ಳು ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಕೆ. ಎಂ. ಶಿವಲಿಂಗೇಗೌಡ: ಎಲ್ಲಿ ಹಣ ಕೊಟ್ಟಿದ್ದೀರಿ? ಮಾನ್ಯ ಸದಾನಂದಗೌಡರು ಒಂದು ಕೋಟಿ ರೂಪಾಯಿ ಹಣ ಕೊಡುತ್ತೇವೆ ಎಂದು ಹೇಳಿದರು ಎಲ್ಲಿ ಕೊಟ್ಟಿದ್ದಾರೆ? ಕೇವಲ ಸುಳ್ಳು ಹೇಳುತ್ತೀರಿ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಬರಗಾಲ ಇರುವುದು ನಿಜ ಎಂದು ಹೇಳಿದ ಮೇಲೆ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಎಂದು ಹೇಳುವುದು ನಮ್ಮ ಹಕ್ಕು. ನಿಯಮ 60 ಎ ಅಡಿಯಲ್ಲಿ ಚರ್ಚೆಯಾಗಬೇಕು. ರಾಜ್ಯ ಜನತೆಗೆ ಮನವರಿಕೆ ಆಗಬೇಕು. ಕೇಂದ್ರ ಸರ್ಕಾರಕ್ಕೆ ಮನವರಿಕೆ ಆಗಬೇಕೆಂದು ನಮಗೆ ಗುರಿ ಇರಬೇಕಾದಾಗ, ನಾವು ಸರ್ಕಾರಕ್ಕೆ ಚರ್ಚೆ ಮಾಡಲು ಸಹಾಯ ಮಾಡುತ್ತಿದ್ದೇವೆ ಎಂದರೆ ನೀವು ಒಪ್ಪಿಕೊಳ್ಳಲು ತಯಾರಿಲ್ಲ, ನಿಯಮ 69 ರ ಅಡಿಯಲ್ಲಿ ತೆಗೆದುಕೊಳ್ಳಿ ಎಂದರೆ ಏನರ್ಥ?

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ : ನಿಯಮ 60ರ ಅಡಿಯಲ್ಲಿ ಚರ್ಚೆಯಾಗಬೇಕು. ಬರದ ಬಗ್ಗೆ ರಾಜ್ಯದ ಜನರಿಗೆ ಮನವರಿಕೆಯಾಗಬೇಕು ಕೇಂದ್ರಸರ್ಕಾರಕ್ಕೆ ಮನವರಿಕೆಯಾಗಬೇಕು ಎಂಬುದು ನಮ್ಮ ಗುರಿಯಾಗಿದೆ. ನಾವು ಸರ್ಕಾರಕ್ಕೆ ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಸಹಾಯವನ್ನು ಮಾಡುತ್ತಿದ್ದೇವೆ ಎಂದು ಹೇಳಿದರೆ ನೀವು ಅದನ್ನು ಒಪ್ಪುವುದಕ್ಕೆ ತಯಾರಿಲ್ಲ ನಿಯಮ 69ರಲ್ಲಿ ಚರ್ಚೆ ತೆಗೆದುಕೊಳ್ಳಿ ಎಂದು ಹೇಳಿದರೆ ಏನರ್ಥ?

ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿ ಗೃಹ ಮತ್ತು ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ನಾವು ಚರ್ಚೆಗೆ ಸಿದ್ದರಿದ್ದೇವೆ. ಮಾನ್ಯ ಸಭಾಧ್ಯಕ್ಷರು 69 ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಅದಕ್ಕೆ ಸರ್ಕಾರವು ಸಿದ್ದರಿದ್ದೇವೆ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಿಯಮ 60 ಮತ್ತು 69ರಲ್ಲಿ ವ್ಯತ್ಯಾಸವಿದೆ. ನಿಯಮ 60–69ರ ವ್ಯತ್ಯಾಸ ಏತಕ್ಕಾಗಿ ಈ ರೂಲ್ ನಲ್ಲಿ ಮಾಡಿದ್ದೀರಿ, ಇವತ್ತು ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿಟ್ಟು ಚರ್ಚೆ ಮಾಡಬೇಕಾದಾಗ ಇವತ್ತು ರಾಜ್ಯದ ಜನರಿಗೆ ಈ ಸಭೆಯ ಮುಖಾಂತರ ಕೊಡುವಂತಹ ಸಂದೇಶವೇನು ಎಂದರೆ ಕರ್ನಾಟಕ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಬಂದಿದೆ. ಮುಂಗಾರು ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಅಂತಹ ಸಂದರ್ಭದಲ್ಲಿ ಚರ್ಚೆ ಮಾಡುವಂತಹ ನಿಟ್ಟಿನಲ್ಲಿ ಚರ್ಚೆ ಮಾಡಬೇಕಾದಾಗ ಅದನ್ನು ನಿಯಮ 60ರ ಅಡಿಯಲ್ಲಿ...

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶವನ್ನು ಕೊಡಿ.

ಅಧ್ಯಕ್ಷರು : ನಿಯಮಾವಳಿ ಪ್ರಕಾರ ಎರಡು ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಎಲ್ಲಿದೆ ? ಮೊದಲನೆಯದು Adjournment Motion ಗೆ ಅವಕಾಶವಿದೆ. ನೀವು ಕೊಟ್ಟ ತಕ್ಷಣ ನಿಯಮವನ್ನು ಬಿಟ್ಟು ಮಾಡಬೇಕೆಂದರೆ ಅದು ಆಗುವುದಿಲ್ಲ.

ಶ್ರೀ ಟಿ. ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಾನು ಮತ್ತೊಮ್ಮೆ ನಿಯಮ 60ರ ಅಡಿಯಲ್ಲಿಯೇ ಚರ್ಚೆಗೆ ಕೊಡಬೇಕೆನ್ನುವಂತಹ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಹೆಚ್. ಡಿ. ರೇವಣ್ಣ: ದಯಮಾಡಿ ನಾನು ಮಾತನಾಡುತ್ತಿದ್ದರೆ, ಮಧ್ಯದಲ್ಲಿ ಎದ್ದು ನಿಂತುಕೊಂಡು interference ಮಾಡುತ್ತಿದ್ದಾರೆ.

ಶ್ರೀ ಟಿ. ಬಿ. ಜಯಚಂದ್ರ : ನಿಯಮ 60 ರ ಅಡಿಯಲ್ಲಿ ಚರ್ಚೆಯಾಗುತ್ತಿರುವಂತಹ ವಿಷಯಗಳು ಬಹಳ ಕಡಿಮೆ ಇದೆ. ಈ ಹಿಂದೆ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಯಡಿಯೂರಪ್ಪನವರು ಇದ್ದಂತಹ ಕಾಲದಲ್ಲಿ ನಿಯಮ 60 ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಟ್ಟು ಆಗ ಕೇಂದ್ರ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಸಾಧ್ಯವಾಯಿತು. ದಯಮಾಡಿ ನಿಯಮ 69ಮತ್ತು ನಿಯಮ 60 ರ ವ್ಯತ್ಯಾಸವನ್ನು ಸಭಾನಾಯಕರಿಗೆ ಹಾಗೂ ಮಾನ್ಯ ಸಭಾಧ್ಯಕ್ಷರಿಗೆ ನಾನು ಹೇಳಬೇಕಾಗಿಲ್ಲ.

ಬಹಳ ಮಹತ್ವ ಇರುವಂತಹದ್ದರ ಬಗ್ಗೆ ತಾವು ಅರ್ಥ ಮಾಡಿಕೊಂಡಿದ್ದೀರಿ. ತಮಗೆ ರೂಲ್ ಎನ್ನುವುದು ಗೊತ್ತಿದೆ. ನಿಯಮ 60 ರಲ್ಲಿ ಚರ್ಚೆ ಮಾಡುವುದರಿಂದ ಇದಕ್ಕೆ ಮಹತ್ವ ಬರುತ್ತದೆ. ಚರ್ಚೆಗೆ ಒಂದು ಅಂತಿಮವಾದಂತಹ ಉತ್ತರವು ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ನಮ್ಮ ಹಕ್ಕು ದಯಮಾಡಿ ನಿಯಮ 60 ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಈ ಬಗ್ಗೆ ಪ್ರಸ್ತಾಪವನ್ನು ಮಾಡಿದ್ದೇನೆ.

ಅಧ್ಯಕ್ಷರು: ತಾವು ಆಗಲೇ ಹೇಳಿದ್ದೀರಿ. ಒಂದು ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿದೆ.

ಶ್ರೀ ಹೆಚ್. ಡಿ. ರೇವಣ್ಣ: ಹಾಗಾದರೆ ನನಗೆ ಮಾತನಾಡುವುದಕ್ಕೆ ಅವಕಾಶವಿಲ್ಲವೇ?

ಅಧ್ಯಕ್ಷರು: ಎರಡು ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಎಲ್ಲಿದೆ?

ಶ್ರೀ ಬಂಡೆಪ್ಪ ಕಾಶೆಂಪೂರ್: ನಾನು ತಮಗೆ 9.25 ಗಂಟೆಗೆ ಚರ್ಚೆ ಮಾಡುವ ಸಂಬಂಧ ಅರ್ಜಿಯನ್ನು ಕೊಟ್ಟಿದ್ದೇವೆ.

ಶ್ರೀ ಹೆಚ್. ಡಿ. ರೇವಣ್ಣ: ದಯಮಾಡಿ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ನಮ್ಮ ದಾಖಲೆಯ ಪ್ರಕಾರ ನೀವು ಅರ್ಜಿ ಕೊಟ್ಟಿರುವುದು ಲೇಟಾಗಿದೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ಬೀದರ್ ನಲ್ಲಿ ಭೀಕರ ಬರಗಾಲ ಇರುವುದರಿಂದ ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ತಾವು ಕೊಡಬೇಕು. ನಾವು ಪ್ರಸ್ತಾವನೆಯನ್ನು ಮಾಡುವುದಕ್ಕೆ ಅವಕಾಶವನ್ನು ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು: ಪ್ರಸ್ತಾವನೆ ಮಾಡುವುದಕ್ಕೆ ನಿಯಮದ ಅಡಿಯಲ್ಲಿ ಅವಕಾಶವಿಲ್ಲ. ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಮಾತ್ರ ಅವಕಾಶವಿದೆ. ಈ ತರಹ ವಾದ ಮಾಡಿದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ನಮಗೆ 5–5 ನಿಮಿಷ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ನಾವು ಮಾತನಾಡುತ್ತೇವೆ.

ಅಧ್ಯಕ್ಷರು: ಒಂದು ವಿಷಯದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದರೂ ನೀವು ಇನ್ನೊಂದಕ್ಕೆ ಅವಕಾಶವನ್ನು ಕೊಡಿ ಎಂದು ಕೇಳುವುದು ಸರಿಯಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ನೀವು ಮಾನ್ಯ ಜಯಚಂದ್ರರವರಿಗೆ ಹಾಗೂ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಿರಿ.

ಅಧ್ಯಕ್ಷರು: ಅವರ ಅರ್ಜಿಯು ಮೊದಲು ಬಂದಿದೆ.

ಶ್ರೀ ಹೆಚ್.ಡಿ. ರೇವಣ್ಣ: ನೀವು ಅವರಿಬ್ಬರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ನಾನು ಇನ್ನೇನು ಪ್ರಶ್ನೆ ಮಾಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಫ್ರೌಡ ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷರೆ

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ದಯಮಾಡಿ ಕುಳಿತುಕೊಳ್ಳುವುದಕ್ಕೆ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಹಾಗೂ ಫ್ರೌಡ ಶಿಕ್ಷಣ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇಡೀ ರಾಜ್ಯದಲ್ಲಿ ಬರಗಾಲವಿದೆ. ಇದರಲ್ಲಿ ವಿರೋಧಪಕ್ಷ ಮತ್ತು ಆಡಳಿತ ಪಕ್ಷ ಎನ್ನುವುದಿಲ್ಲ. ಇಡೀ ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದೆ. ಈ ವಿಷಯದ ಬಗ್ಗೆ ಚರ್ಚೆಯಲ್ಲಿ ಎಲ್ಲರೂ ಭಾಗವಹಿಸುವುದಕ್ಕೆ ಮುಕ್ತವಾಗಿ ಅವಕಾಶವಾಗುವುದು ತಾವು ಇದನ್ನು convert ಮಾಡಿ ಕೊಟ್ಟಾಗ ಮಾತ್ರ.

ಅಧ್ಯಕ್ಷರು: ನಿಯಮದ ಪ್ರಕಾರ Adjournment motion ಗೆ ಒಂದಕ್ಕೆ ಮಾತ್ರ ಅವಕಾಶವಿದೆ. ಒಂದಕ್ಕಿಂತ ಹೆಚ್ಚು ತೆಗೆದುಕೊಳ್ಳುವ ಹಾಗಿಲ್ಲ.

ಶ್ರೀ ಹೆಚ್. ಸಿ. ಬಾಲಕೃಷ್ಣ: ನೀವು ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿಬಿಡಿ ಅದಕ್ಕೆ ನಾವು ಒಪ್ಪಿಕೊಳ್ಳುತ್ತೇವೆ. ನೀವು ನಿಯಮ 60 ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿಬಿಡಿ. ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ.

ಅಧ್ಯಕ್ಷರು: ಚರ್ಚೆ ಮಾಡುವುದಕ್ಕೆ ಎಲ್ಲರಿಗೂ ಅವಕಾಶವನ್ನು ಕೊಡೋಣ. ಆದರೆ preliminary submission ಮಾಡುವುದಕ್ಕೆ ಒಂದಕ್ಕೆ ಮಾತ್ರ ಅವಕಾಶವಿದೆ.

Sri. H.C. BALAKRISHNA: Preliminary submission ಮಾಡುವುದಕ್ಕೆ ಅವಕಾಶವನ್ನು ಕೊಡಿ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಗೂ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರ ಕಳಕಳಿ ನಿಜಕ್ಕೂ ನಮಗೂ ಕೂಡ ಅರ್ಥವಾಗುತ್ತಿದೆ. ಇವತ್ತು ಪ್ರಶ್ನೆ ಬಂದಿರುವುದು ಕರ್ನಾಟಕ ರಾಜ್ಯದಲ್ಲಿ ಕಳೆದ 40 ವರ್ಷಗಳಲ್ಲಿ..

ಶ್ರೀ ಹೆಚ್. ಸಿ. ಬಾಲಕೃಷ್ಣ: ನಾವು submission ಮಾಡುತ್ತಿದ್ದೇವೆ.

ಶ್ರೀ ಕೆ. ಎಸ್. ಈಶ್ವರಪ್ಪ: ತಾವು submission ಮಾಡಿ. ನಾನು ನಿಮ್ಮ ಪರವಾಗಿ ಹೇಳುತ್ತಿದ್ದೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ: ನಾವು submission ಮಾಡುವುದಕ್ಕೆ ಅವಕಾಶವಿಲ್ಲವೆಂದರೆ ಹೇಗೇ?

ಶ್ರೀ ಕೆ. ಎಸ್. ಈಶ್ವರಪ್ಪ: ನಾನು ನಿಮ್ಮ ಪರವಾಗಿ ಹೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು: ಇದು ನಿಯಮ 69ರಲ್ಲಿ ಬರುವುದಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ (ಉಪಮುಖ್ಯಮಂತ್ರಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು): ಕರ್ನಾಟಕ ರಾಜ್ಯದಲ್ಲಿ ಕಳೆದ 40 ವರ್ಷಗಳಲ್ಲಿ ಆಗದೇ ಇರುವಂತಹ ಭೀಕರ ಬರಗಾಲ ಬಂದಿರುವುದರಿಂದ ಈ ಬಗ್ಗೆ ಚರ್ಚೆಯಾಗಲೇಬೇಕಾಗಿದೆ. ಈ ಬಗ್ಗೆ ನಾವೆಲ್ಲರೂ ಪಕ್ಷಾತೀತವಾಗಿ ಒಟ್ಟಿಗೆ ಸೇರಿಕೊಂಡು ಈ ಒಂದು ಬರಗಾಲದ ಸಮಸ್ಯೆಯನ್ನು ಪರಿಹಾರ ಮಾಡುವಂತಹ ದಿಕ್ಕಿನಲ್ಲಿ ಯೋಚನೆಯನ್ನು ಮಾಡಿಕೊಂಡು ಆ ದಿಕ್ಕಿನಲ್ಲಿ ನಾವು ಯೋಜನೆಯನ್ನು ಮಾಡಿಕೊಂಡು ಆ ದಿಕ್ಕಿನಲ್ಲಿ ಮುಂದುವರಿಯುವಂತಹ ಸಂದರ್ಭ ನಾವು ಕೇಂದ್ರದ ಸಹಕಾರವನ್ನು ಕೂಡ ಪಡೆದು ಹೋಗಬೇಕಾಗಿದೆ. ಅದಕೋಸ್ಕರ ಇವತ್ತು ಮಾನ್ಯ ವಿರೋಧಪಕ್ಷದ ನಾಯಕರು ಪ್ರಮುಖರು ಏನು ಇವತ್ತು ಪ್ರಸ್ತಾಪ ಮಾಡಿದ್ದಾರೆ ಇದರ ಬಗ್ಗೆ ಪೂರ್ಣವಾಗಿ ಖಂಡಿತವಾಗಿ ಚರ್ಚೆಯಾಗಬೇಕು. ಇದರ ಬಗ್ಗೆ ಸರ್ಕಾರವು ಪೂರ್ಣವಾಗಿ ತಯಾರಿದ್ದೇವೆ. ಅವರ ಸಲಹೆ ಮತ್ತು ಸಹಕಾರ ಎಲ್ಲವನ್ನು ಪಡೆದು ಈ ಬರಗಾಲ ಬಂದಿರುವುದನ್ನು ನೀಗಿಸುವಂತಹ ದಿಕ್ಕಿನಲ್ಲಿ ಏನೇನು ಮಾಡಬೇಕೆಂಬುದರ ಬಗ್ಗೆಯೂ ಕೂಡ ಅವರ ಜವಾಬ್ದಾರಿಯೂ ಕೂಡ ಖಂಡಿತವಾಗಿಯೂ ಇದೆ. ಇದಕ್ಕೆ ಸರ್ಕಾರವು ಸಂಪೂರ್ಣವಾಗಿಸಹಕಾರವನ್ನು

ಕೊಡುವುದಕ್ಕೆ ತಯಾರಿದ್ದೇವೆ. ನನ್ನ ಪ್ರಾರ್ಥನೆ ಇಷ್ಟೆ, ಎಲ್ಲಾ ಸದಸ್ಯರು ಕೂಡ ಈ ಒಂದು ಭೀಕರ ಬರಗಾಲವಿರುವಂತಹ ಸಂದರ್ಭದಲ್ಲಿ ಚರ್ಚೆಗೆ ಅವರೆಲ್ಲರೂ ಭಾಗವಹಿಸುವುದಕ್ಕೆ ಅವಕಾಶವನ್ನು ತಾವು ಮಾಡಿಕೊಡಬೇಕು. ಇವತ್ತೇನು ನಿಯಮ 60ರ ಅಡಿಯಲ್ಲಿಯೇ ಚರ್ಚೆಯಾಗಬೇಕೆಂಬ ಹಠ ಸ್ವಾಭಾವಿಕವಾಗಿ ವಿರೋಧಪಕ್ಷದಲ್ಲಿ ಇದ್ದುದ್ದೆ, ನಾವು ಸಹ ಅಲ್ಲಿ ಇದ್ದಾಗ ಇದೇ ಕೆಲಸವನ್ನು ಮಾಡಿದ್ದೇವೆ. ಆದರೆ ಇವತ್ತು ದಯವಿಟ್ಟು ಇದನ್ನು ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ convert ಮಾಡಿ ಚರ್ಚೆ ಈಗಲೇ ಆರಂಭ ಮಾಡುವುದಕ್ಕೂ ಕೂಡ ನಾವು ತಯಾರಿದ್ದೇವೆ. ಇದು ತಮಗೆ ಬಿಟ್ಟಿದ್ದು.

ಶ್ರೀ ಸಿದ್ದರಾಮಯ್ಯ (ವಿರೋಧಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾವು ಕಳೆದ ವರ್ಷ ಸದನದಲ್ಲಿ ಬರಗಾಲದ ಬಗ್ಗೆ ಮೂರು ಬಾರಿ ಚರ್ಚೆ ಮಾಡಿದ್ದೇವೆ. ರೂಲ್ 60ರ ಅಡಿಯಲ್ಲಿ ಕೊಡಿ ಎಂದು ಕೇಳಿದಾಗ ತಾವು ರೂಲ್ 69ಕ್ಕೆ convert ಮಾಡಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಮತ್ತೆ ಬರಗಾಲವುಗೋಚರವಾಗಿದೆ. ಬರಗಾಲವು ಕಳೆದ ವರ್ಷ ಬಂದಿರುವುದು ಇನ್ನು ಮುಂದುವರಿಯುತ್ತಿದೆ. ಈಗ ನಾವು ಏತಕ್ಕಾಗಿ ನಿಯಮ 60ರ ಅಡಿಯಲ್ಲಿ ಚರ್ಚೆಯಾಗಬೇಕೆಂದು ಹೇಳುತ್ತಿದ್ದೇವೆಂದರೆ, ಇದಕ್ಕೆ ಹೆಚ್ಚು ಗಂಭೀರತೆ ಮತ್ತು ಮಹತ್ವ ಬರಲಿ ಎನ್ನುವ ಕಾರಣಕೋಸ್ಕರವಾಗಿ ಕೇಳುತ್ತಿದ್ದೇವೆ. ಇದಕ್ಕಿಂತ ಮಹತ್ವದ ವಿಚಾರ ಮತ್ತೊಂದು ಸಿಗುವುದಿಲ್ಲ. ನೀವು ಸಭಾಧ್ಯಕ್ಷರಾಗಿರುವಾಗ convert ಮಾಡಿಬಿಟ್ಟಿದ್ದೀರಿ ಆದರೂ ನಾವು ಈ ಬಗ್ಗೆ ಯಾವತ್ತು ಕೂಡ ಒತ್ತಾಯ ಮಾಡಲಿಲ್ಲ. ಇದುಇಡೀ ರಾಜ್ಯದಲ್ಲಿ 176 ತಾಲ್ಲೂಕುಗಳಲ್ಲಿ ಸುಮಾರು 158 ತಾಲ್ಲೂಕುಗಳಲ್ಲಿ ಮಳೆ ಬಿದ್ದಿಲ್ಲ, ಸುಮಾರು 42 ವರ್ಷಗಳಲ್ಲಿ ಇಷ್ಟೊಂದು ಕಡಿಮೆ ಮಳೆ 43% deficit ಆಗಿದೆ. ಕರ್ನಾಟಕದಲ್ಲಿ deficit category ಆಗಿರುವುದು. For the first time since 1971ಇಸವಿಯಿಂದ ಮೊದಲನೆಯ ಬಾರಿಗೆ ಇಷ್ಟೊಂದು ಭೀಕರ ಬರಗಾಲವಾಗಿದೆ. ರಾಜ್ಯಸರ್ಕಾರಕ್ಕೆ ಇದರ ಗಂಭೀರತೆಯು ಅರ್ಥವಾಗಬೇಕಾಗಿದೆ ಇದೆ ತೀವ್ರತೆಯೂ ಅವರಿಗೆ ಮುಟ್ಟಬೇಕು. ಏಕೆಂದರೆ ಜನರು ನಮ್ಮ ಕಡೆಗೆ ನೋಡುತ್ತಿದ್ದಾರೆ. ಇವತ್ತು ಸದನವು ಸೇರುತ್ತಿದೆ. ಅಸೆಂಬ್ಲಿಯಲ್ಲಿ ಜನ ಪ್ರತಿನಿಧಿಗಳು ಏನು ಮಾಡುತ್ತಾರೆ ಎಂದು ರಾಜ್ಯದ ತುಂಬಾ ಜನರು ಕಣ್ಣಿನಲ್ಲಿ ಎಣ್ಣೆಯನ್ನು ಹಾಕಿಕೊಂಡು ನೋಡುತ್ತಿದ್ದಾರೆ. ಅವರೆಲ್ಲರೂ ಆಕಾಶವನ್ನು ನೋಡುತ್ತಿದ್ದಾರೆ, ವಿಧಾನಸೌಧದ ಕಡೆ ಬಹಳ ಆಕಾಂಕ್ಷಿಗಳಾಗಿ ನೋಡುತ್ತಿದ್ದಾರೆ. ನಾವು ಏತಕ್ಕಾಗಿ ನಿಯಮ 60 ರ ಅಡಿಯಲ್ಲಿ ಚರ್ಚೆಯಾಗಬೇಕೆಂದು ಒತ್ತಾಯ ಮಾಡುತ್ತಿದ್ದೇವೆಂದರೆ ಇದಕ್ಕೆ

ಮಹತ್ವ ಮತ್ತು ಗಂಭೀರತೆಯು ಬರಲಿ ಇದು ಬಹಳ ಮಹತ್ವದ ವಿಚಾರವೆಂದು ಇದು ರಾಜ್ಯದ ಜನತೆಗೆ, ರೈತರಿಗೆ ಹಾಗೂ ಕೂಲಿ ಕಾರ್ಮಿಕರಿಗೆ ಸಂಬಂಧಪಟ್ಟಿರುತ್ತದೆ. ಬೇರೆ ಸಂದರ್ಭದಲ್ಲಿ ರೂಲ್ 69ಕ್ಕೆ convert ಮಾಡಿದ್ದೀರಿ. ನಾವು ಆಗ ಏನು ತೀವ್ರವಾಗಿ ಪರಿಗಣಿಸಿರಲಿಲ್ಲ. ಈ ಸಾರಿ ಒಮ್ಮೆಯಾದರೂ ನಿಮ್ಮ ಅವಧಿಯಲ್ಲಿ ಈ ಬಗ್ಗೆ ನಿಯಮ 60ರ ಅಡಿಯಲ್ಲಿ ಚರ್ಚೆಯಾಗಬೇಕೋ ಅಥವಾ ಬೇಡವೋ, ಮತ್ತೆ ಏತಕ್ಕಾಗಿ ಆ ರೂಲ್ ಬುಕ್ ಇರುವುದು? ಇದಕ್ಕಿಂತ ಮಹತ್ವದ ವಿಚಾರ ಯಾವುದು ಇದೆ ಹೇಳಿ. ಇದಕ್ಕಿಂತ ಗಂಭೀರವಾದ ವಿಚಾರ ಯಾವುದು ಇದೆ. ಕೊಡಗಿನಲ್ಲಿ ಮಳೆ ಇಲ್ಲವೆಂದ ಮೇಲೆ ನೀವು ಅಲ್ಲಿಗೆ ಹೋದರೆ ಜನರು ಸುಮ್ಮನೆ ಇರುತ್ತಾರೆಯೆ? ನಿಮ್ಮಲ್ಲಿ ಎಷ್ಟು percent ಮಳೆಯಾಗಿದೆ? ಅಲ್ಲಿ 40% ಮಳೆ ಕಡಿಮೆಯಾಗಿದೆ.

ಅಧ್ಯಕ್ಷರು: 40–50% ಮಳೆ ಕಡಿಮೆಯಾಗಿದೆ.

ಶ್ರೀ ಸಿದ್ದರಾಮಯ್ಯ: 50% ಮಳೆ ಕಡಿಮೆಯಾಗಿದೆ. ಜನರು ನಿಮ್ಮ ಬಗ್ಗೆ ಸುಮ್ಮನೆ ಇರುತ್ತಾರೆಯೇ? ತಾವು Speaker ಆಗಿ ಇಲ್ಲಿ ಕುಳಿತುಕೊಂಡು..

ಶ್ರೀ ಹೆಚ್. ಡಿ. ರೇವಣ್ಣ: ಅವರು ಕೊಡಗನ್ನು ಪ್ರತ್ಯೇಕ ರಾಜ್ಯ ಬೇಕೆಂದು ಕೇಳಿದ್ದಾರೆ?

ಶ್ರೀ ಸಿದ್ದರಾಮಯ್ಯ: ಅದು ಬೇರೆ ವಿಚಾರ ಬಿಡಿ.

ಅಧ್ಯಕ್ಷರು: ನಾವು ಬೇರೆ ರಾಜ್ಯ ಬೇಕೆಂದು ಯಾವತ್ತು ಕೇಳಲಿಲ್ಲ. ಬೇರೆ ರಾಜ್ಯ ಬೇಕೆಂದು ಕೇಳಿದವರನ್ನು ನಿಲ್ಲಿಸಿದವರು ನಾವೇ ಸುಮ್ಮನ್ನೆ ಏತಕ್ಕಾಗಿ ಆ ವಿಷಯ ಬೇಕು.

ಶ್ರೀ ಸಿದ್ದರಾಮಯ್ಯ: ಸುಮ್ಮನ್ನೆ ಆ ವಿಚಾರವನ್ನು ಈ ವಿಚಾರಕ್ಕೆ mix ಮಾಡುವುದು ಬೇಡ. ತಾವು ದಯಮಾಡಿ ಇಬ್ಬರು ಉಪಮುಖ್ಯಮಂತ್ರಿಗಳು ಏನೇ ಹೇಳಲಿ, ಅವರು ಅವರ ಅಭಿಪ್ರಾಯಗಳನ್ನು ಹೇಳಲಿ ಅದು ಬೇಡವೆಂದು ನಾನು ಹೇಳುವುದಿಲ್ಲ. ಮತ್ತೆ ಇದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ಇದಕ್ಕೆ ಸರ್ಕಾರವು ಕೂಡ ಒಪ್ಪಿಕೊಳ್ಳಬೇಕಾಗುತ್ತದೆ. I hope that, you are fully convinced to take it up under Rule 60 for discussion. Please allow to discuss this matter under Rule 60.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ..

ಅಧ್ಯಕ್ಷರು: ಮಾನ್ಯ ರೇವಣ್ಣನವರು ಒಂದು ನಿಮಿಷ ಮಾತನಾಡಲಿ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಈಶ್ವರಪ್ಪನವರು ಹೇಳಿರುವಂತಹ ಒಂದು ಅಂಶವನ್ನು ಅವರು ಹೇಳಿದಕ್ಕೆ.. ಅವರು ಹೇಳಿದ ಮಾತು.

ಅಧ್ಯಕ್ಷರು: ಮಾನ್ಯ ರೇವಣ್ಣನವರು ಒಂದು ನಿಮಿಷ ಮಾತನಾಡಲಿ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ ನಮಗೆ ಮಾತನಾಡು–ವುದಕ್ಕೆ ಅವಕಾಶ ಬೇಡವೆ,

ಅಧ್ಯಕ್ಷರು: ಮಾನ್ಯ ರೇವಣ್ಣನವರು ಮಾತನಾಡಲಿ.

ಶ್ರೀ ಟಿ. ಬಿ. ಜಯಚಂದ್ರ: ಇದರ ಬಗ್ಗೆ ದೀರ್ಘವಾಗಿ ಚರ್ಚೆಯನ್ನು ಮಾಡೋಣ. ಈಗ ಇದರ ಬಗ್ಗೆ ಚರ್ಚೆಯಾಗಬೇಕು.

ಅಧ್ಯಕ್ಷರು: ಆಯಿತು, ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಮಾನ್ಯ ರೇವಣ್ಣನವರು ಒಂದು ನಿಮಿಷ ಪ್ರಸ್ತಾಪ ಮಾಡುತ್ತಾರೆ ಅವರೇನು ಹೇಳುತ್ತಾರೆ ಹೇಳಲಿ. ತಾವು ಸಹಕಾರವನ್ನು ಕೊಡಿ.

ಶ್ರೀ ಹೆಚ್. ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಸಭಾಧ್ಯಕ್ಷರೆ, ಕಳೆದ 41 ವರ್ಷಗಳ ಇತಿಹಾಸದಲ್ಲಿ ಇವತ್ತು ಮೊದಲನೆ ಬಾರಿ ಬರಗಾಲ ಬಂದಿರುವ ಪರಿಸ್ಥಿತಿ ಬಂದಿದೆ. ಅದರಲ್ಲಿ 158 ತಾಲ್ಲೂಕುಗಳು ಇರಬಹುದು. ಈಗ ಕೆಲವು ಕಡೆ ಇವತ್ತು ಬಿತ್ತನೆ ಮಾಡಿದಂಥ ಬೆಳೆ ಸಂಪೂರ್ಣವಾಗಿ ನಾಶವಾಗಿದೆ. ಮುಂಗಾರು ಬೆಳೆ ಇವತ್ತು ಸಂಪೂರ್ಣವಾಗಿ ನಾಶವಾಗಿ ರೈತರು ಇವತ್ತು ವಿಷ ಕುಡಿಯುವ ಪರಿಸ್ಥಿತಿಯಲ್ಲಿದ್ದಾರೆ. ಏಕೆಂದರೆ ನಾನಲ್ಲ, ಸರ್ಕಾರದ ಮಂತ್ರಿಗಳೇ ಬೇಸಿಗೆಯಲ್ಲಿ ಕುಡಿಯುವ ನೀರು ಸಿಗುವುದಿಲ್ಲವೆಂದುಹೇಳಿದ್ದಾರೆ. ಜನ ಕುಡಿಯುವ ನೀರು ಕೊಡಿ ಬಾಕಿ, ಬೇರೇನೂ ಬೇಡವೆಂದು ಹೇಳುತ್ತಾರೆ. ಕೆಲವು ಕಡೆ ಹೋದರೆ ಮಾನ್ಯ ಸಭಾಧ್ಯಕ್ಷರೆ ಇವತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ ಒಂದು ಕಡೆ ಕುಡಿಯುವ ನೀರು ಒಂದು ಕಡೆ ಮೇವು ಇನ್ನೊಂದು ಕಡೆ ಬರಗಾಲದಿಂದ ಕಾಮಗಾರಿ ಇಲ್ಲ, ಕೂಲಿ ಇಲ್ಲ, ಕೂಲಿ ಇಲ್ಲದೇ ಇವತ್ತು ಹೊರ ರಾಜ್ಯಕ್ಕೆ ಹೋಗುವಂಥ ಪರಿಸ್ಥಿತಿ ಬಂದಿದೆ. ನಾವು ಪತ್ರಿಕೆಗಳಲ್ಲಿ ಹಲವಾರು ಬಾರಿ ನೋಡಿದ್ದೇವೆ. ಇವತ್ತು ರಾಜ್ಯ ಸರ್ಕಾರ ಒಂದೊಂದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆ. ಇದರ ಜೊತೆಗೆ ಬರಗಾಲದ ಬಗ್ಗೆ ನಾವು ಆರು ತಿಂಗಳು, ಸುಮಾರು ಏಳೆಂಟು ತಿಂಗಳುಗಳಾಗಿರಬಹುದು. ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗಿ ಬಂದರು. ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದೇವೆ. ಮಾನ್ಯ ಹಣಕಾಸಿನ ಮಂತ್ರಿಗಳನ್ನು, ಮಾನ್ಯ ಕೃಷಿ ಸಚಿವರನ್ನು ಭೇಟಿ ಮಾಡಿದ್ದೇವೆ. ಎಷ್ಟೆಷ್ಟು ಹಣವನ್ನು ತಂದಿದ್ದಾರೆಂಬುದು ಬೇಕು ಮಾನ್ಯ ಅಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ? ರಾಜ್ಯ ಸರ್ಕಾರದಿಂದ ಎಷ್ಟು ಹಣ ಬಂದಿದೆ. ದಯಮಾಡಿ ಎಲ್ಲಾ ವಿಷಯಗಳನ್ನು ನೀವು ಮುಂದಕ್ಕೆ ಹಾಕಿ. ಇಲ್ಲವೇ ನಿಯಮ 60 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಡಬೇಕು. ಈ ಬಗ್ಗೆ

ಕೂಲಂಕಷವಾಗಿ ಚರ್ಚೆ ಆಗಬೇಕು. ಅದಕ್ಕೆ ಅವಕಾಶ ಕೊಡಬೇಕು ಮಾನ್ಯ ಸಭಾಧ್ಯಕ್ಷರೆ, ನಿಯಮ 69 ರಡಿ ಚರ್ಚೆಗೆ ತೆಗೆದುಕೊಳ್ಳಿ ಕಂದಾಯ ಸಚಿವರಾದ ಸನ್ಮಾನ್ಯ ಈಶ್ವರಪ್ಪನವರು ಹೇಳುತ್ತಾರೆ ಎಂದು ಅದಕ್ಕೆ ಅವಕಾಶ ಕೊಡಬೇಡಿ ದಯಮಾಡಿ ಏಕೆಂದರೆ ಯಾರಾದರೂ ಈಶ್ವರಪ್ಪ, ಅಶೋಕ್‌ರವರು ಏನಾದರೂ ಬರಗಾಲ ಇಲ್ಲವೆಂದು ಹೇಳಿದರೆ ನಾವು ಬೇಡವೆನ್ನುವುದಿಲ್ಲ. ನಮಗೆ ಬರಗಾಲ ಇದೆ. ನಮ್ಮ ವಿರೋಧ ಪಕ್ಷದ ಶಾಸಕರಿಗೆ ಬರಗಾಲವಿದೆ. ಅದರಿಂದ ದಯಮಾಡಿ ಇವತ್ತಿನ ದಿವಸ ಚರ್ಚೆಗೆ ನಿಯಮ 60 ರಲ್ಲೇ ಅವಕಾಶ ಕೊಡಬೇಕೆಂದು ನಾನು ಬೆಳಿಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಈ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಈ ವಿಷಯ ಪ್ರಸ್ತಾಪ ಮಾಡಿದ್ದಕ್ಕೆ ಅವಕಾಶ ಕೊಟ್ಟಿದ್ದರಿಂದ ತಮಗೆ ವಂದನೆ ಸಲ್ಲಿಸಿ ಇದನ್ನು ಕೂಡಲೇ ನಿಯಮ 60 ರಡಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರರು ನಿಯಮ 60 ರಲ್ಲಿ..

ಶ್ರೀ ಹೆಚ್. ಡಿ. ರೇವಣ್ಣ: ಇತರರು ಎಂದರೆ ಸರ್ ನಮ್ಮ ಹೆಸರು ಹೇಳಿ.

ಅಧ್ಯಕ್ಷರು: ನಿಮ್ಮದು ಬರುವುದಿಲ್ಲ.. ಆಯಿತು, ರೇವಣ್ಣನವರು ಸೇರಿ.

ಶ್ರೀ ಹೆಚ್. ಡಿ. ರೇವಣ್ಣ: ಬೇಡ, ಜೆ.ಡಿ.ಎಸ್.ಪಕ್ಷ ಎಂದು ಹೇಳಿ.

ಅಧ್ಯಕ್ಷರು: ಆ ರೀತಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಜೆ.ಡಿ.ಎಸ್. ನವರೆಂದು ಹೇಳಿ.

ಅಧ್ಯಕ್ಷರು: ಆಯಿತು, ರಾಜ್ಯದಲ್ಲಿ ಬರಗಾಲ, ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದ್ದು, ಅತ್ಯಂತ ಗಂಭೀರವಾದಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ನಿಯಮನ 60 ರ ಮೇರೆಗೆ ನೀಡಿರುವ ಸೂಚನೆ ಪ್ರಕಾರ ಕೆಲವರಿಗೆ ಮಾತ್ರ ಅವಕಾಶ ಇದೆ. ಇದು ಅತ್ಯಂತ ಗಂಭೀರವಾದಂಥ ವಿಚಾರವಾಗಿರುವುದರಿಂದ ಎಲ್ಲರೂ ತಮ್ಮ ಅಭಿಪ್ರಾಯವನ್ನು ಮಂಡಿಸಲೇಬೇಕು. ರಾಜ್ಯ ಎಂದೂ ಕಾಣದಂಥ ಬರಗಾಲ ಕಂಡಿದೆ. ನಿಯಮ 60 ರ ಬದಲಿಗೆ ನಿಯಮ 69 ರಡಿಯಲ್ಲಿ ವಿಚಾರವನ್ನು ಚರ್ಚೆ ಮಾಡಲು ಅವಕಾಶ ಮಾಡಿ ಈಗಾಲೇ ಚರ್ಚೆಯನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಎಲ್ಲರಿಗೂ ಕೊಡಿ. You have got discretionary power. Inherent power you have got. You can allow any member to participate in the discussion even under discussion under Rule 60.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ನಿಯಮ 60 ರಡಿ ಕೊಡಿ.

ಶ್ರೀ ಬಂಡೆಪ್ಪ ಕಾಶಂಪೂರ್: ನಿಯಮ 60 ರಡಿ ಅವಕಾಶ ಕೊಡಿ. ಚರ್ಚೆ ಇವತ್ತೇ ಮುಗಿಯುತ್ತದೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: If you allow others to participate in the discussion, we don't mind. The question is, let it be taken up under Rule 60.

ಅಧ್ಯಕ್ಷರು : ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿಗಳು) : ಸರ್, ನಿಯಮ 60 ರಲ್ಲಿ ಕೆಲವೇ ಜನ ಮಾತನಾಡಬಹುದು. ರಾಜ್ಯದಾದ್ಯಂತ ಬರವಿದೆ.

ಶ್ರೀ ಸಿದ್ಧರಾಮಯ್ಯ : ಇದಕ್ಕಿಂತ ಗಂಭೀರವಾದಂಥ ವಿಷಯ ಯಾವುದಿದೆ ನೋಡಿ ಹೇಳೋಣ.

ಶ್ರೀ ಆರ್.ಅಶೋಕ್ : ಮಾನ್ಯ ಅಧ್ಯಕ್ಷರೆ, ನಿಯಮ 60 ರಡಿ ಯಾರು ಸಹಿ ಹಾಕಿರುತ್ತಾರೋ ಅವರು ಮಾತ್ರ ಮಾತನಾಡಬಹುದು. 126 ತಾಲ್ಲೂಕುಗಳಲ್ಲಿ ಬರಗಾಲವಿದೆ. ಅವರೆಲ್ಲಾ ಶಾಸಕರೂ ಸಹ ಸದನದಲ್ಲಿ ಮಾತನಾಡುತ್ತಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನೇಕೆ ಹೇಳುತ್ತಿದ್ದೇನೆಂದರೆ, ಈ ವಿಷಯದ ಗಂಭೀರತೆ ಹೋಗಿಬಿಡುತ್ತದೆ. ರಾಜ್ಯ ಕಷ್ಟದಲ್ಲಿದೆ. ಈ ಕಷ್ಟದಲ್ಲಿ ರೈತರಿಗೆ ನಾವು ಸ್ಪಂದಿಸದೆ ಹೋದರೆ ನಾವೇಕೆ ಇಲ್ಲಿಗೆ ಬರಬೇಕು? What for we should come here?

ಅಧ್ಯಕ್ಷರು: ಎಲ್ಲ ಭಾಗದ ಶಾಸಕರೂ ಮಾತನಾಡುತ್ತಾರೆ.

ಶ್ರೀ ಸಿದ್ದರಾಮಯ್ಯ: ನಮಗೆ ನಿಯಮ 60 ರಡಿ ಮಾತನಾಡಲಿಕ್ಕೆ ಅವಕಾಶ ಕೊಡದೇ ಹೋದರೆ ನಾವು ಏಕೆ ಇಲ್ಲಿಗೆ ಬರಬೇಕು.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ವಿರೋಧ ಪಕ್ಷದವರಿಗೆ ವಿಷಯ ಮುಖ್ಯವೋ, ನಿಯಮ 60,69

ಎನ್ನುವುದು ಮುಖ್ಯವೋ? ಅದರ ಬಗ್ಗೆ ಕಾಲಹರಣ ಮಾಡದೇನೆ ಚರ್ಚೆ ಪ್ರಾರಂಭಿಸಲಿ.

ಶ್ರೀ ಸಿದ್ದರಾಮಯ್ಯ : why there is a rule?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಚರ್ಚೆ ಪ್ರಾರಂಭಿಸುವುದನ್ನು ಬಿಟ್ಟು ನಿಯಮ 60, 69 ಎಂದು ಹೇಳಿದರೆ ಆಗುತ್ತದೆಯೇ? ಚರ್ಚೆ ಪ್ರಾರಂಭಿಸಿ ಒಳ್ಳೆಯ ಸಲಹೆ ಸೂಚನೆಗಳನ್ನು ಕೊಟ್ಟರೆ ಒಟ್ಟಾಗಿ ಬರಗಾಲದ ಪರಿಸ್ಥಿತಿಯನ್ನು ಎದುರಿಸಬಹುದು. ನಿಯಮಗಳನ್ನು ಮೇಲೆ ಕೆಳಗೆ ಹಿಡಿದುಕೊಂಡು ಬರಗಾಲದ ಬಗ್ಗೆ ಚರ್ಚೆ ಶುರು ಮಾಡದೇಹೋದರೆ ಹೇಗೆ? ನೀವು ರೂಲಿಂಗ್ ಕೊಟ್ಟಿದ್ದೀರಿ, ಚರ್ಚೆ ಪ್ರಾರಂಭಿಸಲಿ.

(ಗೊಂದಲ)

ಡಾ: ಹೆಚ್. ಸಿ. ಮಹದೇವಪ್ಪ: ಕೆಲವು ಸಂದರ್ಭಗಳಲ್ಲಿ ನಿಯಮ ಮುಖ್ಯ, ಕೆಲವು ಸಂದರ್ಭಗಳಲ್ಲಿ ವಿಷಯಗಳು ಮುಖ್ಯ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ನಿಯಮ 63 ರ ಪ್ರಕಾರ 23 ಜನ ಶಾಸಕರು ಎದ್ದು ನಿಲ್ಲಬೇಕಾಗುತ್ತದೆ. 23 ಜನ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ. ಆದರೆ ನಿಯಮ 69ರಲ್ಲಿ ಕೇವಲ ಇಬ್ಬರಿಗೆ ಮಾತ್ರ ಅವಕಾಶ ಇರುತ್ತದೆ.

(ಗೊಂದಲ)

ಅಧ್ಯಕ್ಷರು: ಇಲ್ಲ.

ಶ್ರೀ ಆರ್. ಅಶೋಕ್ (ಉಪ ಮುಖ್ಯಮಂತ್ರಿಗಳು): ನಿಯಮ 69 ರಡಿ ಎಷ್ಟು ಜನ ಬೇಕಾದರೂ ಚರ್ಚೆಯಲ್ಲಿ ಭಾಗವಹಿಸಬಹುದು. ನಿಯಮ 60 ರಡಿಯಲ್ಲಿ ಯಾರು ಸಹಿ ಮಾಡಿರುತ್ತಾರೆ ಅಷ್ಟು ಜನರಿಗೆ ಮಾತ್ರ ಚರ್ಚೆಯಲ್ಲಿ ಭಾಗವಹಿಸಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ನಿಯಮ 69 ರಡಿ ಎಲ್ಲರಿಗೂ ಮಾತನಾಡಲಿಕ್ಕೆ ಅವಕಾಶ ಇದೆ. ನೀವು ದಯಮಾಡಿ ಚರ್ಚೆಯನ್ನು ಪ್ರಾರಂಭಿಸಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹಾಗಾದರೆ ನಿಯಮ 60 ಅನ್ನು ತೆಗೆದು ಹಾಕಿಬಿಡಿ. ಅಲಂಕಾರಕ್ಕೋಸ್ಕರ ಆ ನಿಯಮ ಇರಬಾರದು. ಯಾವುದಾದರೂ ವಿಷಯವನ್ನು ಚರ್ಚೆ ಮಾಡಲಿಕ್ಕಾಗಿ ಆ ನಿಯಮ 60 ಸಹ ಇರಲೇಬೇಕಲ್ಲವೇ? ಸುಮ್ಮಸುಮ್ಮನೆ ಈ ನಿಯಮ ಇರುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಬರಗಾಲ ಒಂದು ಜ್ವಲಂತ ಸಮಸ್ಯೆ. ಅದರ ಬಗ್ಗೆ ವಿರೋಧಪಕ್ಷದ ನಾಯಕರು, ಉಪನಾಯಕರು ಮತ್ತು ರೇವಣ್ಣನವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಚರ್ಚೆ ಮಾಡಬೇಕಾಗಿಲ್ಲ. ಬಹುಶಃ ಸದನದ ಬಹುತೇಕ ಎಲ್ಲಾ ಸದಸ್ಯರು ಇದರ ಬಗ್ಗೆ ಪ್ರಸ್ತಾಪ ಮಾಡುವವರಿದ್ದಾರೆ. ಚರ್ಚೆಯಲ್ಲಿ ಭಾಗವಹಿಸುವವರಿದ್ದಾರೆ. ಇಲ್ಲಿಯವರೆಗೆ ನಡೆದುಕೊಂಡು ಬಂದಂಥ ಸಂಪ್ರದಾಯವನ್ನು ನಾವೇನು ಇಲ್ಲಿ ನೋಡಿದ್ದೇವೆ. ನಿಯಮ 60 ರಡಿಯಲ್ಲಿ ವಿಷಯದ ಗಂಭೀರತೆಯನ್ನು ನೋಡಿಕೊಂಡು ಚರ್ಚೆಗೆ ಅವಕಾಶವನ್ನು ಕೊಟ್ಟಿರುತ್ತೀರಿ. ಆದರೆ ಮೊದಲು ಚರ್ಚೆ ಮಾಡುವುದು ಮುಖ್ಯ. ನಾವೀಗ ಆಡಳಿತ ಪಕ್ಷದವರಾಗಿ ಈ ಚರ್ಚೆ ನಡೆಯಬೇಕು ಎನ್ನುವುದು ನಮ್ಮ ಬಯಕೆ ಕೂಡ. ಏಕೆಂದರೆ ಶಾಸಕರು ತಮ್ಮ ಕ್ಷೇತ್ರದ ಬವಣೆಯನ್ನು ಸದನದಲ್ಲಿ ತರಬೇಕು. ನಮ್ಮ ಸರ್ಕಾರದ ಗಮನಕ್ಕೂ ತರುವಂಥದ್ದಾಗಬೇಕು. ಎಲ್ಲರೂ ಚರ್ಚೆಯಲ್ಲಿ ಭಾಗವಹಿಸಬೇಕು. ಇಲ್ಲಿ ಚರ್ಚೆ ಮಾಡುವ ವಿಷಯ ಬಹಳ ಮುಖ್ಯವಾದುದು, ಅದು ನಿಯಮ 60, ನಿಯಮ 69 ಎಂಬುದರ ಬಗ್ಗೆ ಪ್ರತಿಷ್ಠೆ ಮಾಡಿಕೊಳ್ಳುವುದು ಬೇಕಾಗಿಲ್ಲ. ಸನ್ಮಾನ್ಯ ಸಭಾಧ್ಯಕ್ಷರೆ ತಮ್ಮಲ್ಲಿ ನಾನು ವಿನಂತಿಸುತ್ತೇನೆ. ಒಂದು ನಿಮಿಷ ಜಯಚಂದ್ರರವರೇ ನಾನು ಕಂಪ್ಲೀಟ್ ಮಾಡುತ್ತೇನೆ. ಆಮೇಲೆ ಏನಿದ್ದರೂ ನೀವು ಹೇಳಿ. ಈಗಾಗಲೇ, ನಿಯಮ 69 ರಡಿ ಅವಕಾಶ ಕೊಟ್ಟಿದ್ದನ್ನು ಒಪ್ಪಿ, ಚರ್ಚೆ ಮಾಡಲಿಕ್ಕೆ ನಾವು ಅಡಳಿತ ಪಕ್ಷದವರು ತಯಾರಿದ್ದೇವೆ. ಅದಕ್ಕೆ ತಾವು ಚರ್ಚೆಗೆ ಅವಕಾಶ ಕೊಟ್ಟಿದ್ದೀರಿ. ಮತ್ತೆ ಚರ್ಚೆಯನ್ನು ತಕ್ಷಣವೇ ಪ್ರಾರಂಭಿಸುವಂತೆ ತಾವು ಹೇಳಿದ್ದೀರಿ. ಹೀಗಾಗಿ ಇವತ್ತು ನಿಯಮ 69 ರ ಪ್ರಕಾರ ಚರ್ಚೆಗೆ ತಾವು ಆದೇಶ ಮಾಡಿದ್ದೀರಿ. ಈಗಾಗಲೇ ತಾವು ಅದಕ್ಕೆ ರೂಲಿಂಗ್ ಕೊಟ್ಟಿದ್ದೀರಿ. ಆ ರೂಲಿಂಗ್ ಕೊಟ್ಟ ಮೇಲೆ ಪುನಃ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ಇವತ್ತು ಈ ಒಂದು issue ಬಗ್ಗೆ ಅಂದರೆ ಈ ಬರಗಾಲದ ಗಂಭೀರತೆ

ಬಗ್ಗೆ ಚರ್ಚೆ ಮಾಡಲಿಕ್ಕೆ ನಾವು ತಯಾರಿದ್ದೇವೆ. ಅವರು ಚರ್ಚೆ ಮಾಡಲಿ, ನಾವು ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೇವೆಂದು ಹೇಳುವುದಕ್ಕೂ ನಾವು ತಯಾರಿದ್ದೇವೆ. ಎಲ್ಲದಕ್ಕೂ ನಾವು ತಯಾರಿದ್ದೇವೆ. ದಯವಿಟ್ಟು ಚರ್ಚೆಯನ್ನು ಪ್ರಾರಂಭ ಮಾಡಲಿ. ಈಗಾಗಲೇ ತಾವು ರೂಲಿಂಗ್ ಕೊಟ್ಟುಬಿಟ್ಟಿದ್ದೀರಿ. ನಿಒಯಮ 69 ರ ಪ್ರಕಾರ ಚರ್ಚೆ ಪ್ರಾರಂಭ ಮಾಡಲಿ.

ಶ್ರೀ ಸಿದ್ದರಾಮಯ್ಯ: ನಮ್ಮ ಅಭಿಪ್ರಾಯ ಸ್ವಲ್ಪ ಕೇಳಿ ಸ್ವಾಮಿ. ಇದರಲ್ಲಿ ನಮ್ಮದು ಪ್ರತಿಷ್ಠೆ ಇಲ್ಲವೇ ಇಲ್ಲ. ನಾನು ನೋಟಿಸ್ ಕೊಟ್ಟಿರುವಂಥದ್ದು ನಿಯಮ 60 ರಲ್ಲಿ. ಈಗ ರೂಲ್ಸ್ ಕಮಿಟಿಯಿದೆ. The intention of the Rules Committee is ಯಾವುದಾದರೂ ಮಹತ್ತರವಾದ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕಾಗಿ ನಿಯಮ 60 ಅನ್ನು ಇಟ್ಟಿರುವುದು ಎಂದು ನಾನು ಅಂದುಕೊಂಡಿದ್ದೇನೆ. ನೋಟೀಸ್ ಕೊಡುವುದಕ್ಕೆ ಇದೊಂದು ದಾರಿ. ಅದನ್ನು ನಿಯಮ 69 ರಲ್ಲಿ ಮಾಡಲಿಕ್ಕೆ ಇದನ್ನು ಇಟ್ಟಿಲ್ಲ. ಹಾಗಿದ್ದರೆ ನಿಯಮ 69 ಸಾಕಾಗಿತ್ತು. ನಿಯಮ 60 ಇರುವುದು ಬಹಳ ಗಂಭೀರವಾದಂಥ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂಥ, ಜರೂರಾದಂಥ, ಅತ್ಯಂತ ಅನಿವಾರ್ಯವಾದಂಥ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೋಸ್ಕರ, ವಿಶೇಷ ಸಂದರ್ಭಗಳಲ್ಲಿ ಮಾಡುವಂಥದ್ದು. ಇದೊಂದು ವಿಶೇಷ ಸಂದರ್ಭ. ವಿಶೇಷ ಸಂದರ್ಭ ಮತ್ತೆ ಗಂಭೀರವಾದಂಥ ವಿಚಾರ. ಇದಕ್ಕಿಂತ ಗಂಭೀರವಾದಂಥದ್ದು, ಇದಕ್ಕಿಂಥ ಪ್ರಾಮುಖ್ಯವಾದಂಥದ್ದು ನನಗೆ ಯಾವುದು ತೋಚುವುದಿಲ್ಲ. ಏಕೆಂದರೆ ಇಡೀ ರಾಜ್ಯ, ಕೇವಲ ಹಳ್ಳಿಗಳಲ್ಲ, ಪಟ್ಟಣಗಳಲ್ಲಿಯೂ ಕೂಡ ಕುಡಿಯಲಿಕ್ಕೆ ನೀರಿಲ್ಲ. ಸುಮಾರು 250 ವಾರ್ಡ್‌ಗಳು ಪಟ್ಟಣಗಳಲ್ಲಿವೆ. ಬೆಂಗಳೂರಿನಲ್ಲಿ ಕುಡಿಯುವುದಕ್ಕೆ ನೀರಿಲ್ಲ. ಟ್ಯಾಂಕ್‌ಗಳ ಮೂಲಕ ನೀರು ಒದಗಿಸುತ್ತಿದ್ದಾರೆ. ಕುಡಿಯುವ ನೀರಿಗಾಗಿ ಸುಮಾರು ಒಂದು ಸಾವಿರ ಟ್ಯಾಂಕರ್‌ಗಳನ್ನು ಇಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಇಷ್ಟೆಲ್ಲಾ ಕುಡಿಯವ ನೀರಿನ ಸಮಸ್ಯೆ,ಮೇವಿನ ಸಮಸ್ಯೆ ಜನರು ಗುಳೆ ಹೋಗುತ್ತಿದ್ದಾರೆ. ದನಕರುಗಳನ್ನು throw off price ಗೆ, ಮಾರಾಟ ಮಾಡಿಬಿಡುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಜನ ಸಾಯುತ್ತಿದ್ದಾರೆ, ಸಾಲಗಾರರಾಗಿಬಿಟ್ಟಿದ್ದಾರೆ, ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿಗೆ ಬಂದು ಬಿಟ್ಟಿದ್ದಾರೆ. ಮೊನ್ನೆ ಮೊನ್ನೆ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾವೇರಿಯಲ್ಲಿ, ಅವರ ಹಳೆಯ ಜಿಲ್ಲೆಯಲ್ಲಿ 15 ಜನರು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೂರು ಜನ ಶಿರಾದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇಂಥ ಗಂಭೀರವಾದಂಥ ವಿಚಾರವಿದೆ. ರಾಜ್ಯದ ರೈತರು ಆತ್ಮಹತ್ಯೆ ಮಾಡಿಕೊಳ್ಳುವಂಥ ಪರಿಸ್ಥಿತಿ ಬಂದಿದೆ. ಇವತ್ತು ಪ್ರಕೃತಿ ವಿಕೋಪಕ್ಕೆ ಸಿಲುಕಿಕೊಂಡು ಈ ಪರಿಸ್ಥಿತಿ ಆಗಿದೆ. ಅದರಿಂದ ದಯಮಾಡಿ ಇದೊಂದು ಸಾರಿ ನಾನು ನಿಮಗೆ convince ಮಾಡುತ್ತಿದ್ದೇನೆ. ದಯಮಾಡಿ please allow the discussion under Rule 60. ಅವರು ಪ್ರತಿಷ್ಠೆ ಮಾಡಿಕೊಳ್ಳುವುದು ಬೇಡ. Even they are agreeing. Why they are making it as prestige? ಒಪ್ಪಿಕೊಳ್ಳುತ್ತೇನೆ. ನಿಯಮ 60 ಇರುವುದು ಇದಕ್ಕೋಸ್ಕರ ಎಂದು ನಾನು ಅಂದುಕೊಂಡಿದ್ದೇನೆ. ದಯಮಾಡಿ ನೀವು ಇದನ್ನು allow ಮಾಡಿ.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಸ್ಪೀಕರ್ ಆಗಿ ಕುಳಿತಿದ್ದಂಥ ಶ್ರೀ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಯಾದ ಮೇಲೆ ಬಹಳ ಧೈರ್ಯವಾಗಿರುತ್ತಾರೆಂದು ನಾನು ಅಂದುಕೊಂಡಿದ್ದೆವು.

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಸಮಯ ವ್ಯರ್ಥ ಮಾಡುವುದು ಬೇಡ. ತಾವು ಈಗ ನಿಯಮ 69 ಕ್ಕೆ ಏನು ಅನುಮೋದನೆ ಕೊಟ್ಟಿದ್ದೀರಿ, ಅದನ್ನು ನಾವು ತೆಗೆದುಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ಅದರ ಪ್ರಕಾರ ಬಹಳ ಗಂಭೀರವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಟಿ. ಬಿ. ಜಯಚಂದ್ರ: ಶ್ರೀ ಈಶ್ವರಪ್ಪನವರು, ಶ್ರೀ ಅಶೋಕ್‌ರವರ ಬಾಯಿಯಲ್ಲಿ ಈ ಮಾತು ಬರುತ್ತದೆಂದು ಹೇಳಿದರೆ, ನೀವು ಸಮರ್ಥವಾಗಿದ್ದೀರಿ ಎಂದು ಹೇಳಿ, ನಿಯಮ 60 ರ ಪ್ರಕಾರ ಮಾಡುತ್ತೇವೆಂದು ಚರ್ಚೆಗೆ ಸಿದ್ಧರಾಗಬೇಕೇ ವಿನಃ ಏಕೆ ಈ ರೀತಿ ಮಾತನಾಡುತ್ತಿದ್ದೀರಿ? ಇಡೀ ಪಾರ್ಲಿಮೆಂಟ್‌ನಲ್ಲಾಗಲಿ ಅಥವಾ ವಿಧಾನಸಭೆಯಲ್ಲಾಗಲಿ ನಿಯಮ 60 ರಡಿಯಲ್ಲಿ ಚರ್ಚೆ ಮಾಡಿದಾಗ ರೂಲಿಂಗ್ ಕೊಡಬೇಕಾಗುತ್ತದೆ, ಒಂದು ತೀರ್ಮಾನವನ್ನು ಕೊಡಬೇಕಾಗುತ್ತದೆ. ಆಗ ಕೇಂದ್ರ ಸರ್ಕಾರಕ್ಕೆ ಅಪೀಲು ಮಾಡುವುದಕ್ಕೆ ಅನುಕೂಲವಾಗುತ್ತದೆ. ದಯಮಾಡಿ ಇದನ್ನು ಅರ್ಥ ಮಾಡಿಕೊಳ್ಳಿ. ಆ ಕಾರಣಕ್ಕೋಸ್ಕರ ನಾವು ಕೇಳುತ್ತಿದ್ದೇವೆ ವಿನಃ ನಿಯಮದ ಪ್ರತಿಷ್ಠೆ ನಮಗಿಲ್ಲ. ನಿಮಗೆ ಆ ಪ್ರತಿಷ್ಠೆ ಇರಬಾರದು. ರಾಜ್ಯದ ಜನರ ಬಗ್ಗೆ ಅವರ ಕಳಕಳಿ ಬಗ್ಗೆ, ಅವರ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಈ ಒಂದು ರೂಲ್‌ನಲ್ಲಿ ಒಳ್ಳೆ ಅವಕಾಶಯಿದೆ ಎನ್ನುವ ದೃಷ್ಟಿಯಿಂದೆ ಹೇಳುತ್ತಿದ್ದೇವೆ. ಕೊನೆಯದಾಗಿ ತಮಗೆ ಅಪೀಲು ಮಾಡುತ್ತಿದ್ದೇವೆ. ಇದನ್ನು ತಮ್ಮ ವಿವೇಚನೆಗೆ ಬಿಟ್ಟಿದ್ದೇವೆ. ನಾವು ಎಷ್ಟೆಂದು ಜಗಳ ಮಾಡುವುದು ನೀವೇ ಹೇಳಿ?

ಅಧ್ಯಕ್ಷರು: ಈಗಾಗಲೇ ಇಡೀ ರಾಜ್ಯ ಬರಗಾಲದ ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿರುವುದರಿಂದ ಆಡಳಿತ ಪಕ್ಷದವರು ಕೂಡ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಡಲೇಬೇಕಾಗಿದೆ. ನಿಯಮ 60 ರಡಿಯಲ್ಲಿ ಚರ್ಚೆಯಾದರೆ ಇದು ನಿಯಂತ್ರಣವಾಗುತ್ತದೆ. ಆದುದರಿಂದ ಎಲ್ಲರಿಗೂ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟು ಒಮ್ಮತದ ಸಲಹೆಗೆ ಬರಬೇಕಾಗುತ್ತದೆ. ಹಾಗಾಗಿ ನಿಯಮ 69 ರಡಿಯಲ್ಲಿ ಚರ್ಚೆ ಮಾಡಿ. ವಿರೋಧ ಪಕ್ಷದವರು ಪ್ರಾರಂಭ ಮಾಡಿ.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನಿಯಮ 69 ರ ಪ್ರಕಾರ ಚರ್ಚೆಯಾದರೆ ಇಬ್ಬರಿಗೆ ಮಾತ್ರ ಅವಕಾಶವಿರುವುದು. ಶ್ರೀ ಸಿದ್ದರಾಮಯ್ಯನವರು ಮತ್ತು ನಾನು ಮಾತನಾಡಿದರೆ ಬೇರೆಯವರು ಏನು ಮಾಡಬೇಕು?

ಅಧ್ಯಕ್ಷರು: ಹಾಗೇನಿಲ್ಲ ಎಲ್ಲರೂ ಮಾತನಾಡಬಹುದು.

ಶ್ರೀ ಟಿ. ಬಿ. ಜಯಚಂದ್ರ : ತಮಗೆ ಅಧಿಕಾರವಿದೆ. ಈ ನಿಯಮಾವಳಿಗಳನ್ನು ಬೇಡವೆಂದು ಕಿತ್ತು ಹಾಕಿಬಿಡಿ. ಈ ಸಮಸ್ಯೆಯೇ ಬೇಡ.

ಅಧ್ಯಕ್ಷರು: ದಯವಿಟ್ಟು ತಾವು ಪ್ರಾರಂಭ ಮಾಡಿ.

ಶ್ರೀ ಟಿ. ಬಿ. ಜಯಚಂದ್ರ : ಸರ್ಕಾರಕ್ಕೆ ಒಳ್ಳೆಯಾದಾಗಲೆಂದು ನಾವು ಹೇಳುತ್ತಿದ್ದೇವೆ.ಸರ್ಕಾರಕ್ಕೆ ಅದು ಬೇಕಿಲ್ಲವೆಂದರೆ ನಾವೇನು ಮಾಡುವುದು? ಮಾನ್ಯ ಜಗದೀಶ್ ಶೆಟ್ಟರ್ ರವರು ಎಷ್ಟು ಸಮರ್ಥರು ಸಭಾಧ್ಯಕ್ಷರಾಗಿದ್ದಾಗ ಹೇಗಿದ್ದರು. ಮುಖ್ಯಮಂತ್ರಿ ಆದಾಗ ಹೇಗಿದ್ದಾರೆಂಬ ಬಗ್ಗೆ ಪರೀಕ್ಷೆ ಮಾಡುವುದಕ್ಕೆ ಒಳ್ಳೆಯ ಅವಕಾಶ.

ಶ್ರೀ ಆರ್ ಅಶೋಕ್(ಉಪಮುಖ್ಯಮಂತ್ರಿಗಳು): ಕನಿಷ್ಟ ಇಬ್ಬರು ಸಹಿ ಮಾಡಬೇಕಷ್ಟೆ. ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶವಿದೆ. ನಮ್ಮ ಆಡಳಿತ ಪಕ್ಷದ ಬಹಳಷ್ಟು ಸದಸ್ಯರು ಮಾತನಾಡಬೇಕಾಗಿದೆ. ಆದುದರಿಂದ ತಾವೇನು 69ಕ್ಕೆ ಅವಕಾಶ ಕೊಟ್ಟಿದ್ದೀರಿ ಅದನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಶ್ರೀ ಟಿ. ಬಿ. ಜಯಚಂದ್ರ: ಸಂಸದೀಯ ವ್ಯವಹಾರಗಳ ಸಚಿವರು ಸದನದಲ್ಲಿಲ್ಲ. ಅವರನ್ನು ಕರೆಸಿ. ಉಪ ಮುಖ್ಯಮಂತ್ರಿಗಳಾದ ಶ್ರೀ ಆರ್.ಅಶೋಕ್ ರವರಿಗೆ ನಿಯಮ ಗೊತ್ತಿಲ್ಲ. ಹೆಚ್ಚಿನ ಮಹತ್ವ ಬರಬೇಕಾದರೆ ನಿಯಮ 60 ರಡಿಯಲ್ಲಿ ಚರ್ಚೆ ಮಾಡಬೇಕಾಗುತ್ತದೆ.

ಅಧ್ಯಕ್ಷರು: ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಾರಂಭ ಮಾಡಿ.

ಶ್ರೀ ಜಗದೀಶ್ ಶೆಟ್ಟರ್: ಶ್ರೀ ಸಿದ್ದರಾಮಯ್ಯನವರು ಇಲ್ಲಿ ಉಪ ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ತಾವು ಸಚಿವರಾಗಿ ಕೆಲಸ ಮಾಡಿದ್ದೀರಿ. ಆ ಸಂದರ್ಭದಲ್ಲಿ ನಾನು Leader of opposition ಆಗಿ ಕೆಲಸ ಮಾಡಿದ್ದೀನಿ. ನಿಯಮ 60ರ ಪ್ರಕಾರ ನಾನು ಅಂದು ಎಷ್ಟು adjournment motion ಅನ್ನು ತೆಗೆದುಕೊಂಡು ಬಂದಿದ್ದೆ. ನಿಯಮ 60 ಪ್ರಕಾರ ನೀವೆಷ್ಟು allow ಮಾಡಿದ್ದೀರಿ? ಅದಕ್ಕೆ ಅನುಮತಿ ಕೊಟ್ಟಿದ್ದೀರಿ? ಮಾನ್ಯ ಸಭಾಧ್ಯಕ್ಷರಿಗೆ request ಮಾಡಿದ್ದೀರಿ? ಎಷ್ಟಕ್ಕೆ ಅನುಮೋದನೆ ಕೊಟ್ಟಿದ್ದೀರಿ? ಎಲ್ಲವನ್ನೂ ನಿಯಮ 69ರಲ್ಲಿ ಚರ್ಚೆ ಮಾಡಿದ್ದೇವೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ವಿರೋಧ ಪಕ್ಷದ ನಾಯಕರು: ಇಷ್ಟು ಭೀಕರ ಬರಗಾಲ 47 ವರ್ಷಗಳಲ್ಲಿ ಬಂದಿದೆಯೇ ನೀವೇ ಹೇಳಿ? For the first time since 1979 there is such a severe drought. ನಿಯಮ 69 ಗೆ convert ಮಾಡಿದರೆ ಕೇವಲ ಇಬ್ಬರೇ ಮಾತನಾಡುವುದು.

ಅಧ್ಯಕ್ಷರು: ಹಾಗೇನಿಲ್ಲ ಎಲ್ಲರಿಗೂ ಅವಕಾಶ ಕೊಡುತ್ತೇವೆ.

ಶ್ರೀ ಸಿದ್ಧರಾಮಯ್ಯ: ನಿಯಮ 60 ರಲ್ಲಿ 23 ಜನ ಮಾತನಾಡಬಹುದು. ಇದು ಬಹಳ ಗಂಭೀರ ಮತ್ತು ಮಹತ್ವಪೂರ್ಣವಾದದ್ದು.

ಅಧ್ಯಕ್ಷರು: ಮಹತ್ವಪೂರ್ಣವಾದದ್ದು, ಅದರ ಬಗ್ಗೆ ಎರಡು ಮಾತಿಲ್ಲ. ನಿಯಮ 69 ರಲ್ಲೇ ಮಾತನಾಡಿ.

ಶ್ರೀ ಸಿದ್ಧರಾಮಯ್ಯ: ಜೊತೆಯಲ್ಲಿ ಊಟಮಾಡುತ್ತೀರಿ ಅವರೇಕಾಳು ತಿನ್ನಬೇಡ ಎಂದರೆ ಹೇಗೆ? ಮಹತ್ವಪೂರ್ಣ ವಿಷಯ ಕೊಡಗಿನಲ್ಲಿ ಮಳೆ ಬಿದ್ದಿಲ್ಲ ಎಲ್ಲ ಸರಿ. Not under Rule 60 ಎಂದರೆ ಹೇಗೆ? ನೀವು ಮಾಡಿ ಸರ್ಕಾರದವರು ಹೇಳಿದ ಹಾಗೆ ಕೇಳಬೇಕೆಂದು ಎಲ್ಲಿದೆ?

ಅಧ್ಯಕ್ಷರು: ಹಾಗೇನಿಲ್ಲ.

ಶ್ರೀ ಸಿದ್ಧರಾಮಯ್ಯ: ಮತ್ತೆ ಮಾಡಿ.

ಅಧ್ಯಕ್ಷರು: ನಾನು ಈಗಾಗಲೇ ತೀರ್ಮಾನ ಕೊಟ್ಟಿದ್ದೇನೆ. ತಾವು ಪ್ರಾರಂಭ ಮಾಡಿ.

ಶ್ರೀ ಸಿದ್ಧರಾಮಯ್ಯ: ಸಭಾಧ್ಯಕ್ಷರು ಅನುಮತಿ ಕೊಟ್ಟಿಲ್ಲವೆಂದು ನಾವು ಜನರಿಗೆ ಹೇಳುತ್ತೇವೆ.

ಅಧ್ಯಕ್ಷರು: ನಿಯಮ 69 ರಡಿಯಲ್ಲಿ ಚರ್ಚೆ ಪ್ರಾರಂಭ ಮಾಡಿ.